ಓಂ

ಶ್ರೀಮದಮೃತಚಂದ್ರಸೂರಿವಿರಚಿತ

ಪುರುಷಾರ್ಥಸಿದ್ಧ್ಯುಪಾಯಃ

(ಜಿನಪ್ರವಚನರಹಸ್ಯ-ಕೋಶಃ)

ವ್ಯಾಖ್ಯಾನಕಾರರು:

ಪಂಡಿತರತ್ನ ಶ್ರೀ. ಎ. ಶಾಂತಿರಾಜ ಶಾಸ್ತ್ರಿಗಳು, ಮೈಸೂರು.

ಶ್ರೀ ಅನಂತಕೀರ್ತಿ ಗ್ರಂಥಮಾಲೆಯ ೧೮ನೆಯ ಪುಷ್ಪ

ಓಂ

ಶ್ರೀಮದಮೃತಚಂದ್ರಸೂರಿವಿರಚಿತ

ಪುರುಷಾರ್ಥಸಿದ್ಧ್ಯುಪಾಯಃ

(ಜಿನಪ್ರವಚನರಹಸ್ಯ-ಕೋಶಃ)

ಪಣಪಿಲ ಅರಮನೆ ದೇಜಮ್ಮನವರ

ಶಾಸ್ತ್ರದಾನ

1946

ಪ್ರಕಾಶಕರು:

ಶ್ರೀ. ಕೋ. ಶಿ. ಕಾರಂತ,

ರೆಜಿಸ್ಟರ್ಡ್ ಪಬ್ಲಿಶರ್, ಪುತ್ತೂರು.

ಬೆಲೆ:— ಆತ್ಮಕಲ್ಯಾಣ.



ಶ್ರೀ ೧೦೮ ಅನಂತಕೀರ್ತಿ ನಿರ್ಗ್ರಂಥ ಮಹಾಮುನಿಗಳು



ಸ್ವರ್ಗೀಯ ಪಣಪಿಲ ಅರಮನೆ ಶ್ರೀವರ್ಮ ಶೆಟ್ಟರು

ಜನನ: 8—4—1889 ಮರಣ: 16—12—1945

ಮುನ್ನುಡಿ

ಇದು ಪಣಪಿಲ ಅರಮನೆಯ ಶ್ರೀಶ್ರೀ ಶ್ರೀವರ್ಮ ಶೆಟ್ಟರ ಧರ್ಮ ಪತ್ನಿಯವರಾದ ಶ್ರೀ ದೇಜಮ್ಮನವರ ಈವಂದಿನ ಶಾಸ್ತ್ರದಾನದ ಹೊತ್ತಿಗೆ. ಕೆಲ ತಿಂಗಳ ಹಿಂದೆ ಕಳದ ಪಾರ್ಥಿವ ಸಂ। ಮಾರ್ಗಶಿರ ಶುದ್ಧ ೧೨ ರವಿವಾರದಂದು (೧೬—೧೨—೧೯೪೫) ನನ್ನ ಮಿತ್ರರಾಗಿದ್ದ ಶ್ರೀವರ್ಮ ಶೆಟ್ಟರು ದಿವಂಗತರಾಗಿ ಒಂದೇ ದಂಟಿನಲ್ಲಿ ಹಿಂದುಮುಂದಾಗಿ ಅರಳಿದ ಹೂವೆರಡರಂತಿದ್ದ ಆ ಪತಿಪತ್ನಿಯರಲ್ಲಿ ಒಂದು ಹೂ ಬಾಡಿ ಜಗುಳಿತು, ಕೆಲಕಾಲದಿಂದ ಅವರ ಸಂಸಾರದ ನಭಸ್ತಲದಲ್ಲಿ ಕಂಗೊಳಿಸುತಿದ್ದ ಆ ಜೋಡು ನಕ್ಷತ್ರಗಳಲ್ಲಿ ಒಂದು ನಕ್ಷತ್ರ ಉದುರಿ ಹೋಯಿತು. ಶೆಟ್ಟರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ! ಅವರನ್ನು ಕುರಿತು ಕೆಲ ಮಾತುಗಳನ್ನು ಇಲ್ಲಿ ಹೇಳಬೇಕೆಂದಿದ್ದೇನೆ.

ಶ್ರೀವರ್ಮ ಶೆಟ್ಟರು ಇದೇ ಕಳದ ವಿರೋಧಿ ಸಂ। ಚೈತ್ರ ಶುದ್ಧ ೮ ಸೋಮವಾರ (೮—೪—೧೮೮೯) ಜನ್ಮವೆತ್ತಿದರು. ಅವರ ತಂದೆ ಮೂಡ ಬಿದರೆಯ ಪಟ್ಟಣಶೆಟ್ಟಿ ಮನೆತನದ ರಾಜು ಶೆಟ್ಟರು, ತಾಯಿ ತುಳುನಾಡಿನ ಜೈನ ಅರಸುಮನೆತನಗಳಲ್ಲಿ ಒಂದಾದ ಪಣಪಿಲ ಅರಮನೆಯ ಧರ್ಮ ರಾಯ ಕೊನ್ನಾರರ ಸೋದರ ಸೊಸೆ ಸಂಕಮ್ಮನವರು. ಶೆಟ್ಟರನ್ನು ಪಡೆದ ಕೆಲವೇ ದಿನಗಳಲ್ಲಿ ತಾಯಿ ಕಣ್ಣುಮುಚ್ಚಿಕೊಂಡರು. ಅಳಿಯ ಸಂತಾನದ ಕಟ್ಟಿನ ಮೇರೆಗೆ ಕುಟುಂಬದಲ್ಲಿ ಬೇರೆ ಹೆಣ್ಣು ಮಕ್ಕಳಿಲ್ಲದೆ ಶೆಟ್ಟರ ಶೈಶವ ಹೆಚ್ಚಾಗಿ ಮಲತಾಯಿಯ ಮಡಿಲಲ್ಲೇ ಕಳೆಯಿತು. ಆ ಚಿಕ್ಕಂದಿನಲ್ಲಿ ಮೂಡಬಿದರೆಯ ತನುನಂಗಡಿ ಗುಮ್ಮಪ್ಪ ಶೆಟ್ಟರು ತಮ್ಮನ್ನು ಪಾಲಿಸುತಿದ್ದರೆಂದು ಶ್ರೀವರ್ಮ ಶೆಟ್ಟರು ಆಗ್ಗಾಗ್ಗೆ ಹೇಳುತಿದ್ದರು. ಮೂಡಬಿದರೆಯ ಮಿಡ್ಲ್ ಸ್ಕೂಲಿನಲ್ಲಿ ಶೆಟ್ಟರ ಶಿಕ್ಷಣ ಮುಗಿಯುತ್ತಲೆ, ಅಜ್ಜನೂ ಮಾವನೂ ಅದನ್ನು ಮುಂದರಿಸಲೀಯದುದರಿಂದ ಅದು ಅಲ್ಲಿಗೇ ತೀರಿದರೂ, ಅವರು ವ್ಯವಹಾರಕ್ಕೆ ತಕ್ಕಷ್ಟು ಇಂಗ್ಲೀಸು ಭಾಷಾ ಜ್ಞಾನವನ್ನೂ ಅದರೊಂದಿಗೆ ಕನ್ನಡ ಹಾಗೂ ಧಾರ್ಮಿಕ ಜ್ಞಾನವನ್ನೂ ಸಂಪಾದಿಸಿದ್ದರು.

ಪಣಪಿಲ ಅರಮನೆ ನಾಲ್ಕು ಶಾಖೆಗಳಿಂದ ಒಡಗೂಡಿರುವ ದೊಡ್ಡ ದೊಂದು ಜಮಿಾನ್ದಾರಿಯ ಮನೆ. ಅವುಗಳಲ್ಲೊಂದಾದ ಕೆಲ್ಲಪುತ್ತಿಗೆಯ ಅರಮನೆ ಮೊದಲೇ ಪಣಪಿಲ ಅರಮನೆಯ ದಾಯಾದಿಯೊಬ್ಬರಿಗೆ ವಿಭಾಗ

ವಾಗಿ ಹೋಗಿತ್ತು. ಉಳಿದ ಮೂರು ಶಾಖೆಗಳನ್ನು ಧರ್ಮರಾಯ ಕೊನ್ನಾರರು ಪಟ್ಟಾಧಿಕಾರಿಗಳಾಗಿ ಅನುಭವಿಸುತ್ತಿದ್ದರು. ಆ ಮನೆತನಕ್ಕೆ ಮುಂದೆ ಹೆಣ್ಣು ಸಂತತಿ ಇಲ್ಲದಿರುವುದರಿಂದ, ಉಳಿದಿರುವ ತಾವು ಮೂರು ಮಂದಿ ಆ ಆಸ್ತಿಯನ್ನು ಹಂಚಿಕೊಳ್ಳೋಣ ಎಂದು ಕೊನ್ನಾರರು ತಮ್ಮ ಮೊಮ್ಮಗನಾದ ಶ್ರೀವರ್ಮ ಶೆಟ್ಟರೊಡನೆ ಪ್ರಸ್ತಾವಿಸಿದಾಗ, ಶೆಟ್ಟರು ಕೊನೆಯ ಮೆಂಬರರಾಗಿದ್ದರೂ ತಮ್ಮ ಸಾಹಜಿಕವಾದ ಔದಾರ್ಯದಿಂದ ಮೂಂಟ್ರಾಡಿ ಅರಮನೆಯನ್ನು ಅವರ ಪಾಲಿಗೆ ಬಿಟ್ಟುಕೊಟ್ಟರು.

೧೯೦೭ರಲ್ಲಿ ಶ್ರೀವರ್ಮ ಶೆಟ್ಟರು ತುಳುನಾಡಿನ ಪ್ರಸಿದ್ಧ ಜಮೀನ್ದಾರರಲ್ಲಿ ಒಬ್ಬರಾದ ಅಗರಿ ಪಾಚಪ್ಪ ಶೆಟ್ಟರ ಪುತ್ರಿ ದೇಜಮ್ಮನವರನ್ನು ಮದುವೆಯಾದರು. ದೇಜಮ್ಮನವರು ಕೂಡ ಪೆರಾಡಿ, ಜಪ್ಪು, ಅತ್ತಾವರ ಗ್ರಾಮಗಳ ದೊಡ್ಡ ಜಮೀನ್ದಾರಿಯ ಮನೆತನದವರು. ಹೀಗಾಗಿ ಅವರೂ ಚಿಕ್ಕಂದಿನಿಂದ ವಿಪುಲವಾದ ಸಂಪತ್ತಿನ ಅಂಕದಲ್ಲಿ ಬೆಳೆದವರು. ವಿನಯವಂತರೂ ಗುಣವಂತರೂ ಧರ್ಮವಂತರೂ ಆದ ಆ ಪತಿಪತ್ನಿಯರ ಒಡಗೂಟವು ಕರ್ಪೂರಚಂದನಗಳ ಸಮ್ಮೇಳನದಂತೆಯೂ ಮಣಿಕಾಂಚನ ಸಂಯೋಗದಂತೆಯೂ ಆಪ್ಯಾಯಮಾನವಾಯಿತು. ದೇಜಮ್ಮನವರ ಕೈಯ್ಪಿಡಿದಂದಿನಿಂದ ಕೊನೆಯನಕ ಅವರು ಎಣೆವಕ್ಕಿಗಳಂತೆ ಆದರ್ಶ ದಂಪತಿಗಳಾಗಿದ್ದರು.

೧೯೧೮ರಲ್ಲಿ ಧರ್ಮರಾಯ ಕೊನ್ನಾರರು ದಿವಂಗತರಾದರು. ಆಗ್ಗೆ ಅವರ ಕುಟುಂಬದಲ್ಲಿ ಇದ್ದವರೆಂದರೆ ಮಾವ ಪದ್ಮರಾಜ ಶೆಟ್ಟರು ಮತ್ತು ಅಳಿಯ ಶ್ರೀವರ್ಮ ಶೆಟ್ಟರು, ಇವರಿಬ್ಬರೇ. ವರಿಸೆಯ ಹಾಗೂ ವಾವಿಯ ಮೇರೆಗೆ ಪದ್ಮರಾಜ ಶೆಟ್ಟರು ಪಟ್ಟಕ್ಕೆ ಬರಬೇಕಾಗಿದ್ದರೂ, ಅವರು ಪ್ರಕೃತಿಯಿಂದ ಅಶಕ್ತರೂ ಸದಾ ಕಾಯಿಲೆಯವರೂ ಆಗಿದ್ದು ಅದಕ್ಕೆ ಒಪ್ಪದಿದ್ದ ಕಾರಣ ಅವರಿಗೆ ಬೇರೊಂದು ಆಸ್ತಿಯನ್ನು ಬಿಟ್ಟುಕೊಟ್ಟು ಮಿಕ್ಕೆಲ್ಲ ಆಸ್ತಿಗೆ ಶ್ರೀವರ್ಮ ಶೆಟ್ಟರು ಅಧಿಕಾರಿಗಳಾದರು.

ಶ್ರೀವರ್ಮ ಶೆಟ್ಟರಿಗೆ ಚಿಕ್ಕಂದಿನಿಂದಲೂ ಜೈನ ಗುರುಗಳೂ ಶಾಸ್ತ್ರಗಳೂ ಎಂದರೆ ತುಂಬಾ ಆದರ, ತುಂಬಾ ಪ್ರೀತಿ. ಶ್ರೀ ಪಾರ್ಶ್ವನಾಥ ತೀರ್ಥಂಕರನ ಶಾಸನದೇವತೆಯಾದ ಪದ್ಮಾವತಿ ಅವರ ಅರಮನೆಯ ಅಧಿಷ್ಠಾತ್ರಿದೇವಿ. ಪ್ರತ್ಯೇಕ ಚತುರ್ದಶಿಯಂದು ಆ ಗಂಡಹೆಂಡಂದಿರು ಆ ದೇವಿಯನ್ನು ಸಂಗೀತದೊಡನೆ ಬಹಳ ಶ್ರದ್ಧೆಯಿಂದ ಪೂಜಿಸುತ್ತಿದ್ದರು. ಅವಳ ಅಪ್ಪಣೆ ಇಲ್ಲದೆ ಅವರು ಯಾವ ಲೌಕಿಕ ಕಾರ್ಯವನ್ನೂ ಮಾಡು

ತ್ತಿರಲಿಲ್ಲ. ತಮಗೆ ಮಕ್ಕಳಿಲ್ಲ ಎಂಬ ಅದೊಂದೇ ಕೊರತೆಯಲ್ಲದೆ ಬೇರಾವ ಕೊರತೆಯೂ ಆ ದಂಪತಿಗಳಿಗೆ ಇದ್ದಿಲ್ಲ.

ಒಂದು ಕಾಲದಲ್ಲಿ ನೆಲ್ಲಿಕಾರು ಗ್ರಾಮವೂ ಪಣಪಿಲ ಅರಮನೆಯ ಒಡೆತನದಲ್ಲಿ ಒಳಪಟ್ಟಿದ್ದಿತು. ನೆಲ್ಲಿಕಾರಿನ ಶ್ರೀ ಅನಂತನಾಥ ತೀರ್ಥಂಕರನ ಬಸದಿಯನ್ನು ಆ ಅರಮನೆಯವರೇ ಸ್ಥಾಪಿಸಿದರೆಂದು ಅಲ್ಲಿಯ ಶಾಸನದಲ್ಲಿದೆ. ಹೀಗಾಗಿ ಆ ಬಸದಿಯಲ್ಲಿ ಜರಗತಕ್ಕ ನೈಮಿತ್ತಿಕ ಕಾರ್ಯಗಳು ಆ ಅರಮನೆಯಿಂದಲೇ ನಡೆದು ಬರಬೇಕು. ಆ ಮೇರೆಗೆ ಶೆಟ್ಟರು ನೆಲ್ಲಿಕಾರು ಬಸದಿಯ ರಥೋತ್ಸವ ಮೊದಲಾದುವನ್ನು ತಾವೇ ಮನಮುಟ್ಟಿ ಮಾಡಿಸುತ್ತಿದ್ದರು.

೧೯೧೯ರಲ್ಲಿ ಶೆಟ್ಟರು ಸಪತ್ನೀಕರಾಗಿ ಸಮ್ಮೇದಶಿಖರದ ಯಾತ್ರೆಯನ್ನೂ ೧೯೨೩ರಲ್ಲಿ ಊರ್ಜಯಂತಗಿರಿ ಎಂಬ ಗಿರನಾರದ ಯಾತ್ರೆಯನ್ನೂ ಮಾಡಿದರು. ಆಗಲೆ ಮೂಡಬಿದರೆಯಲ್ಲಿ ನೆರವೇರಿದ ಪಂಚಕಲ್ಯಾಣ ಮಹೋತ್ಸವದಲ್ಲಿ ಅವರು ಆವಂದಿನ ಚಾರುಕೀರ್ತಿ ಪಟ್ಟಾಚಾರ್ಯರ ಬಲಗೆಯ್ಯಾಗಿದ್ದು ಎಲ್ಲಾ ಕಾರ್ಯಗಳನ್ನು ಉತ್ಸಾಹದಿಂದ ಸಾಂಗಗೊಳಿಸಿದರು ಮಾತ್ರವಲ್ಲ, ಆ ಉತ್ಸವಕ್ಕೆ ಬಿಜಯಗೆಯ್ದ ಸಾಧುಗಳಿಗೂ ತ್ಯಾಗಿಗಳಿಗೂ ತಮ್ಮ ಸ್ವಂತ ವೆಚ್ಚದಿಂದ ಆಹಾರದಾನದ ವ್ಯವಸ್ಥೆಯನ್ನು ಆ ಪತಿಪತ್ನಿಯರು ಬಹಳ ಶ್ರದ್ಧೆಯಿಂದ ಏರ್ಪಡಿಸಿದ್ದರು. ೧೯೨೮ರಲ್ಲಿ ವೇಣೂರಲ್ಲಿ ಜರುಗಿದ ಶ್ರೀ ಗೋಮಟೇಶ್ವರನ ಮಹಾಮಸ್ತಕಾಭಿಷೇಕದ ೫ನೆಯ ದಿನದ ಕಾರ್ಯವನ್ನೂ ಶೆಟ್ಟರು ಬಹಳ ವಿಜೃಂಭಣೆಯಿಂದ ಮಾಡಿಸಿದ್ದರು.

೧೯೨೭ರಲ್ಲಿ ನೆಲ್ಲಿಕಾರಲ್ಲಿ ಜರುಗಿದ ತೌಳವದೇಶೀಯ ಜೈನ ಬ್ರಾಹ್ಮಣ ಸಭೆಯ ಅಧ್ಯಕ್ಷರಾಗಿ ಶ್ರೀವರ್ಮ ಶೆಟ್ಟರು ಮಾಡಿದ ಭಾಷಣವನ್ನು ಕೇಳಿದವರಿಗೆ ಹಾಗೂ ಆ ಸಭೆಗೆ ಅವರು ಮಾಡಿದ ಉದಾರ ದ್ರವ್ಯಸಹಾಯವನ್ನು ಬಲ್ಲವರಿಗೆ ಸಾಮಾಜಿಕ ವಿಷಯಗಳಲ್ಲೂ ಅವರಿಗೆ ಎಷ್ಟು ಆಸಕ್ತಿ ಇತ್ತು, ಅವರ ವಿಚಾರ ಎಷ್ಟು ತೀವ್ರವಾಗಿತ್ತು ಎಂದು ಸಹಸಾ ಮನದಟ್ಟದಿರದು. ಹಲವು ಸ್ನೇಹಿತರು ಪ್ರೋತ್ಸಾಹಿಸಿದುದರ ಫಲವಾಗಿ ಅವರು ಕಾರ್ಕಳ ತಾಲೂಕು ಬೋರ್ಡಿನ ಮೆಂಬರರಾಗಿದ್ದಾಗ ಹಲವು ಜನೋಪಕಾರದ ಕಾರ್ಯಗಳನ್ನು ಸಾಧಿಸಿದ್ದರು.

ತುಳುನಾಡಿನ ಜೈನರಿಗೆ ವರ್ಷಂಪ್ರತಿಯ ಆಶ್ವಯುಜ ಶುಕ್ಲ ೮ ಜೀವದಯಾಷ್ಟಮಿ ಎಂಬ ದೊಡ್ಡ ಪುಣ್ಯಪರ್ವವಷ್ಟೆ. ಆವತ್ತು ಪ್ರತ್ಯೇಕ

ಜೈನನು ಉಪವಾಸ, ಏಕಾಶನ, ಜಲಪಾನ ಮೊದಲಾದ ವ್ರತಗಳನ್ನು ತಂತನ್ನ ಶಕ್ತ್ಯನುಸಾರವಾಗಿ ಮಾಡದಿರುವುದಿಲ್ಲ. ಆ ದಿನವನ್ನು ಧರ್ಮ ಧ್ಯಾನದಿಂದ ಕಳೆಯಬೇಕೆಂಬ ಹೆಬ್ಬಯಕೆಯಿಂದ ನೂರಾರು ಶ್ರಾವಕ-ಶ್ರಾವಿಕೆಯರು ಮೂಡಬಿದರೆಯಲ್ಲಿ ಸೇರಿ ಅಲ್ಲಿಯ ೧೮ ಬಸದಿಗಳಲ್ಲಿ ಜಿನದರ್ಶನ, ಜಿನಪೂಜೆ ಮೊದಲಾದ ಪುಣ್ಯಕಾರ್ಯಗಳನ್ನು ಮಾಡುವರು. ಆದರೆ ಏಕಾಶನ-ಜಲಪಾನ ವ್ರತ ಉಳ್ಳವರಿಗೆ ಹೊತ್ತಿಗೆ ಸರಿಯಾಗಿ ಶುದ್ಧವಾದ ಆಹಾರವೂ ನೀರೂ ದೊರೆಯದೆ ತುಂಬ ಕಷ್ಟಕ್ಕೆ ಈಡಾಗುವುದನ್ನು ಈ ಪುಣ್ಯದಂಪತಿಗಳು ಮನಗಂಡು ಆ ಬಗ್ಗೆ ತಕ್ಕ ವ್ಯವಸ್ಥೆಯನ್ನು ವರ್ಷೇ ವರ್ಷೇ ಮಾಡುತಿದ್ದರು ಮಾತ್ರವಲ್ಲ, ಆಗ್ಗೆ ಯಾವೊಂದು ಜೈನ ಧರ್ಮಗ್ರಂಥವನ್ನು ಪ್ರಕಟಿಸಿ ಧರ್ಮಾರ್ಥವಾಗಿ ಹಂಚುತಿದ್ದರು, ಹಾಗೂ ಸ್ಥಳಿಕ ವೈದ್ಯಶಾಲೆಗೂ ಆ ಪುಣ್ಯತಿಥಿಯ ಸ್ಮಾರಕವಾಗಿ ದ್ರವ್ಯಸಹಾಯ ಮಾಡುತಿದ್ದರು. ಅದಲ್ಲದೆ ಆಗ್ಗೆ ನೆರೆದ ಜನರಿಗೆ ತಮ್ಮ ವೆಚ್ಚದಿಂದ ಗುರುಗಳ ಬಸದಿಯಲ್ಲಿ ಸಿದ್ಧಾಂತ ದರ್ಶನವನ್ನೂ ಮಾಡಿಸುತಿದ್ದರು.

> ಆಹಾರಾಭಯ ವೈದ್ಯ ಶಾಸ್ತ್ರಮೆನೆ ಚಾತುರ್ದಾನದಿಂ ಸೌಖ್ಯಸಂ
> ದೋಹಂ.................................... ।

ಆ ಸಂದರ್ಭದಲ್ಲಿ ಜೈನೇತರ ಬಡವರಿಗೂ ಏನಿಲ್ಲವೆ? ಎಂದು ಗೆಳೆಯರೊಬ್ಬರು ಮಾಡಿದ ಪ್ರಶ್ನೆಯನ್ನು ನೆನವಿನಲ್ಲಿ ಇರಿಸಿಕೊಂಡು ಸಿಂಹ ಮಾಸದಲ್ಲಿ ಊರಿನ ಬಡವರು ಹೊಟ್ಟೆಗಿಲ್ಲದೆ ಉಪವಾಸ ಬೀಳುತ್ತಿರುವಾಗ ಪಣಪಿಲ ಅರಮನೆಯಲ್ಲಿ ಒಂದು ದಿನ ಸಾವಿರಾರು ಬಡಬಗ್ಗರಿಗೆ ಪರಮಾನ್ನದೂಟವನ್ನು ಹಾಕುತಿದ್ದರು. ಅದೂ ಅಲ್ಲದೆ ಕಳದ (೧೯೪೫) ಮೇ ತಿಂಗಳಲ್ಲಿ ಒದಗಿದ ಬಟ್ಟೆಯ ತುಟ್ಟಿಯಲ್ಲಿ ಸಾವಿರಾರು ರೂಪಾಯಿಯ ಬಟ್ಟೆಯನ್ನು ಮಂದಿಗೆಲ್ಲಾ ಹಂಚಿದ್ದರು.

> ಇತ್ತೊಡೆ ಬರ್ಪುದೇ ಬಡತನಂ? ಕುಡದಿರ್ದಡೆ ಲಕ್ಷ್ಮಿ ನಿಲ್ವುದೇ?

ಎಂದೇ ಅವರ ಸದಾಶಯವಾಗಿತ್ತು.

ಶ್ರೀವರ್ಮ ಶೆಟ್ಟರಿಗೆ ಪ್ರಾಣಿಗಳಲ್ಲಿ ತುಂಬಾ ದಯೆ, ತುಂಬಾ ಅಕ್ಕರೆ—"ಜೀವದಯಾಮತಂ ಪರಮ ಧರ್ಮಂ." ತಮ್ಮ ಒಕ್ಕಲುಮನೆಗಳಲ್ಲಿ ಹಂದಿಯೇ ಮೊದಲಾದ ಜೀವಿಗಳನ್ನು ಕೊಲ್ಲಬಾರದೆಂದು ಕಟ್ಟಾಜ್ಞೆಯನ್ನು ವಿಧಿಸಿದ್ದಲ್ಲದೆ, ಅವರು ಅತ್ತಾವರದಲ್ಲಿದ್ದಾಗ ಯಾರಾದರೂ ಮುದಿ ಎತ್ತುದನಗಳನ್ನು ಕಟುಕರಿಗೆ ಮಾರುವರೆಂದು ಕೇಳಿದರೆ ಕೂಡಲೆ ಅವರು ಕೇಳಿದಷ್ಟು ಬೆಲೆ ತೆತ್ತು ಆ ಪ್ರಾಣಿಗಳನ್ನು ನೆಟ್ಟಗೆ ತಮ್ಮ ಪಣ

ಪಿಲ ಅರಮನೆಗೆ ಒಯ್ದು ಬಹಳ ಮಮತೆಯಿಂದ ಸಾಕುತಿದ್ದರು—"ಸುಕೃತಂ ಸ್ವರ್ಗಸುಖಕ್ಕೆ ಕಾರಣಂ."

ಶೆಟ್ಟರು ತುಂಬಾ ವಿದ್ಯಾಭಿಮಾನಿ, ತುಂಬಾ ವಿದ್ಯಾಪ್ರೇಮಿ. ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಅವರು ಧನಸಹಾಯ ಮಾಡುತಿದ್ದರು. ನೆಲ್ಲಿಕಾರು ಬೋರ್ಡು ಶಾಲೆ ತಾತ್ಕಾಲಿಕವಾದೊಂದು ಕಟ್ಟಣದಲ್ಲಿ ನಡೆಯುತಿದ್ದಾಗ ಅವರು ಅದಕ್ಕೊಂದು ಹೊಸ ಕಟ್ಟಡವನ್ನು ಕಟ್ಟಿಸಿ ಕೊಟ್ಟರು. ಶೆಟ್ಟರವರ ಈ ಆಸ್ಥೆಯನ್ನು ಮನವರಿಸಿಕೊಂಡು ಶ್ರೀ ದೇಜಮ್ಮನವರೂ ಇದೇ ವ್ಯಯ ಸಂ। ಜ್ಯೇಷ್ಠ ಶುಕ್ಲ ಜಯ ಶ್ರುತಪಂಚಮಿಯಂದು ಪಣಪಿಲ ಅರಮನೆಯ ಹಜಾರದಲ್ಲಿ ಜೈನ ಕನ್ಯಾ ಪಾಠಶಾಲೆಯನ್ನು ತೆರೆದು ಅಲ್ಲಿ ಕಲಿಯುವ ಬಾಲಿಕೆಯರಿಗೆ ಧರ್ಮಾರ್ಥವಾಗಿ ಧಾರ್ಮಿಕ ಶಿಕ್ಷಣದ ಹಾಗೂ ಊಟ-ವಸತಿಗಳ ಯೋಗ್ಯ ವ್ಯವಸ್ಥೆಯನ್ನು ಮಾಡಿಸಿರುತ್ತಾರೆ. ಹಾಗೂ ತಮ್ಮ ತರುವಾಯವೂ ಆ ಶಾಲೆ ನಿರಂತರ ನಡೆಯುತ್ತಿರುವಂತೆ ಅವರು ೨೨೩ ಮುಡಿ ಅಕ್ಕಿ ಗೇಣಿ ಬರುವ ಆಸ್ತಿಯನ್ನೂ ಆ ಶಾಲೆಯ ಮುಂಬೆಳವಿಗೆಯ ಬಗ್ಗೆ ಇದೇ ಕಳದ ಅಗೋಸ್ತು ತಿಂಗಳಲ್ಲಿ ದಾನಮಾಡಿರುತ್ತಾರೆ.

ಶ್ರೀವರ್ಮ ಶೆಟ್ಟರಿಗೆ ದಿಗಂಬರ ಮುನಿಗಳಲ್ಲಿ ತುಂಬಾ ಭಕ್ತಿ. ತುಳುನಾಡಿಗೆ ಆಗಾಗ್ಗೆ ವಿಹಾರಕ್ಕೆ ಬರುತ್ತಿರುವ ಮುನಿಸಂಘದ ಸೇವೆಯನ್ನವರು ತನುಮನಧನಗಳಿಂದ ಮಾಡುತಿದ್ದರು. ಕೊನೆಯ ರುಗ್ಣ ಶಯ್ಯೆಯಲ್ಲಿದ್ದಾಗ ಕೂಡ ಹುಬ್ಬಳ್ಳಿಯಿಂದ ಮುನಿಸಂಘವು ನಮ್ಮ ಜಿಲ್ಲೆಗೆ ಬಂದು ವಿಹಾರಕ್ಕೆ ಹೊರಡುವುದೆಂದು ಅವರಿಗೆ ಗೊತ್ತಾಗುತ್ತಲೆ, ತಮಗೆ ಆ ಮುನಿಸಂಘದ ದರ್ಶನ ಲಭಿಸದೆ ಹೋಯಿತಲ್ಲ! ಎಂದು ಎಷ್ಟೋ ಹಂಬಲಿಸಿ, ಪ್ರಯತ್ನಪೂರ್ವಕವಾಗಿ ಎದ್ದು ಕುಳಿತುಕೊಂಡು ನಮೋಸ್ತು ಸ್ವಾಮಿನ್ನಮೋಸ್ತು ಎಂದು ಮೂರು ಬಾರಿ ಹೇಳಿ ಮರಳಿ ಮಲಗಿಕೊಂಡರು.

ಶೆಟ್ಟರಿಗೆ ನಿಷ್ಕಪಟಿಗಳಾದ ಬಡವರನ್ನು ಕಂಡರಂತೂ ತುಂಬಾ ಕನಿಕರ. ಅವರ ಭೋಜನಶಾಲೆ ಅಂಥವರಿಗಾಗಿ ಸದಾ ತೆರೆದೇ ಇತ್ತು. ಎಷ್ಟೋ ಬಡವರಿಗೆ ಅವರು ಗುಟ್ಟಾಗಿ ಧನಸಹಾಯ ಮಾಡುತಿದ್ದರು. ಅವರ ಆಶ್ರಿತವರ್ಗವು ಕಷ್ಟದಿಂದ ಬಳಲುತಿದ್ದರೆ ಅಂಥವರನ್ನು ಮೇಲೆತ್ತುವ ಬಗ್ಗೆ ತನ್ನಿಂದಾಗತಕ್ಕ ಯಾವ ಸಹಾಯವನ್ನೂ ಮಾಡುವರೆ ಅವರು ಹಿಂಜರಿಯುತ್ತಿರಲಿಲ್ಲ. ಇವೆಲ್ಲಾ ಅವರ ಸತ್ಕಾರ್ಯಗಳನ್ನೂ,

ಪಡೆವಂ ಪೂರ್ವದ ಪುಣ್ಯದಿಂ ಸಿರಿಯನಾತಂ ಶ್ರೀದಯಾಮೂಲದೊ
ಳ್ಪಡೆವಂ.. ;

ಎಂಬ ರತ್ನಾಕರ ಸಿದ್ಧನ ವಚನದಂತೆ ತಾವು ಪಡೆದ ಆ ಐಶ್ವರ್ಯವನ್ನು ದಯಾಮೂಲವಾಗಿ ಸತ್ಕಾರ್ಯಗಳಲ್ಲಿ ಅವರು ಬಳಸಿದುದನ್ನೂ ಪರ್ಯಾಲೋಚಿಸುವಲ್ಲಿ ಆ ರತ್ನಾಕರ ಸಿದ್ಧನದೇ

ನರರೊಳ್ಪುಟ್ಟಿ ನರೇಂದ್ರನಾದ ದಿನದೊಳ್ ಸದ್ಧರ್ಮವಂ ಸನ್ಮುನೀ
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥರ್ಗಾಶ್ರಿತರ್ಗೀವುತಂ ।
ಪರಿವಾರ ಪ್ರಜೆಗಳ್ಗೆ ತಾಯ ತೆರದಿಂದೋವುತ್ತಮಿರ್ಪಂ ಧರಾ
ವರನಿಂದಾ ಬರ್ದಿಲಕ್ಕೆ ನಾಳಿನವನೈ ರತ್ನಾಕರಾಧೀಶ್ವರಾ ॥ ೮೩ ॥

ಎಂಬ ಬೇರೊಂದು ವಚನದ ಅಡಿಗಡಿಗೂ ನೆನಪಾಗಿ, ಹಾಗಾದರೆ ಇಲ್ಲಿ ಧರಾವರರಾಗಿದ್ದ ಶೆಟ್ಟರು ಈಗ ಬರ್ದಿಲಕ್ಕೆ, ಅಂದರೆ ಸ್ವರ್ಗಕ್ಕೆ, ಸ್ವರ್ಗ ಸುಖಕ್ಕೆ ವರರಾದರೆಂದು ಬೋಧೆಯಾಗುತ್ತಲೆ ಮನಸ್ಸು ರೋಮಾಂಚಿಸುತ್ತದೆ.

ಶ್ರೀವರ್ಮ ಶೆಟ್ಟರ ದೇಹವು ಧೃಷ್ಟಪುಷ್ಟವೂ ಗಟ್ಟಿಮುಟ್ಟೆಯೂ ಆಗಿದ್ದು ಅವರಲ್ಲಿ ತೀವ್ರವಾದ ಚಟುವಟಿಕೆಯೂ ಇತ್ತು. ಮುಖ ಗಂಭೀರ, ಮುಖದಲ್ಲಿ ಸಾತ್ತ್ವಿಕಭಾವ ಮಿಗಿಲು. ಕಳೆದ ೧೯೪೪ನೆಯ ಮೇ ತಿಂಗಳಲ್ಲಿ ಅವರಿಗೆ ವಾಯುರೋಗ ಪ್ರಾದುರ್ಭವಿಸಿ, ಕ್ರಮೇಣ ಶೋಫೆಯಾಗಿ ಪರಿಣಮಿಸಿತು. ಅದರ ನಿವಾರಣೆಗೋಸ್ಕರ ಅವರು ಮಂಗಳೂರಿನ ಅತ್ತಾವರದಲ್ಲಿದ್ದು ಅನೇಕ ಪ್ರಸಿದ್ಧ ವೈದ್ಯರಿಂದ ಚಿಕಿತ್ಸೆ ಹೋದುತಿದ್ದರೂ ರೋಗವಂತೂ ಗುಣಮುಖವಾಗಲಿಲ್ಲ. ಕ್ರಮೇಣ ಆ ಅಸೌಖ್ಯ ವಾಸಿಯಾಗದೆಂದು ಮನದಟ್ಟುತ್ತಲೆ ಅವರು ಶರೀರದಲ್ಲಿ ಉದಾಸೀನರಾಗುತ್ತ ಬಂದರು. ಆ ಮೇಲೆ ಅತ್ತಾವರದ ಮನೆಯಲ್ಲಿ ಪೂಜಿಸುತಿದ್ದ ಸಿದ್ಧ ಪ್ರತಿಮೆಯನ್ನು ಪ್ರತ್ಯಹವೂ ಮೂರು ಸಲ ದರ್ಶನ ಮಾಡುತ್ತಲೂ, ಮೂಡಬಿದರೆಯ ಪಂಡಿತ ಶ್ರೀ ನೇಮಿರಾಜ ಶೆಟ್ಟರನ್ನು ಸಮೀಪದಲ್ಲಿ ಇರಿಸಿಕೊಂಡು ಅವರೊಂದಿಗೆ ಧರ್ಮಕಥಾಪ್ರಸಂಗ ಮಾಡುತ್ತಲೂ ಹೊತ್ತುಗಳೆಯ ತೊಡಗಿದರು.

ಕೊನೆಯ ದಿನ ಬಂತು. ಹಗಲು ಸಂಜೆಯಾಯಿತು. ಶೆಟ್ಟರು ದ್ವಾದಶಾನುಪ್ರೇಕ್ಷೆಯನ್ನೂ ಪಂಚಪರಮೇಷ್ಠಿ ಸ್ವರೂಪಗಳನ್ನೂ ಪಠನ ಮಾಡಿಸಿದರು. ಬಂದವರ ಯೋಗಕ್ಷೇಮಗಳನ್ನು ವಿಚಾರಿಸಿದರು. ಆಗ್ಗೆ ಅಕಸ್ಮಾತ್ತಾಗಿ ಓಕರಿಸಿದರು. ಹಾಗೆಯೇ ಮೈ ಬಹಳ ಬಿಸುಪೇರಿತು.

ನಾಡಿಯ ಗತಿಯಲ್ಲಿ ವ್ಯತ್ಯಾಸವಾಗ ತೊಡಗಿತು. ಆಗ್ಗೆ ಇನ್ನು ಅವರ ಬದುಕುವಿಕೆಯಲ್ಲಿ ಅನುಮಾನವಾಗಿ ಶ್ರೀ ನೇಮಿರಾಜ ಪಂಡಿತರು ಅವರಿಗೆ ಹೀಗೆಂದರು—

"ಈ ಲೋಕದಲ್ಲಿಯ ೮೪ ಲಕ್ಷ ಯೋನಿಗಳಲ್ಲಿ ಮಾನವ ಜನ್ಮದ ಪ್ರಾಪ್ತಿಯಾದರೊ ಬಹಳ ದುರ್ಲಭ. ಆ ಜನ್ಮ ಪಡೆದರೂ ಉತ್ತಮ ಕುಲ, ನಿರೋಗವಾದ ಶರೀರ, ಸಮ್ಯಗ್ಜ್ಞಾನಾದಿಗಳ ಸಂಪನ್ನತೆಯೇ ಮೊದಲಾದುವುಗಳ ಪ್ರಾಪ್ತಿ ಮತ್ತೂ ದುರ್ಲಭ. ಇಂತಹವೆಲ್ಲವನ್ನು ಹೊಂದಿ ಯಾವಾತನು ಅವನ್ನು ಸಾರ್ಥಕವಾಗಿಸನೊ, ಆತನು ಕಾಗೆಯನ್ನು ಓಡಿಸಲಿಕ್ಕೆ ಚಿಂತಾಮಣಿಯನ್ನು ಸಮುದ್ರದಲ್ಲಿ ಎಸೆದು ಬಿಡುವ ಮೂರ್ಖನಂತೆ ತನ್ನ ಜನ್ಮವನ್ನು ತೀರ ವ್ಯರ್ಥಮಾಡಿಕೊಳ್ಳುವನು. ಆದುದರಿಂದ ಚಿಂತಾಮಣಿಯಂತಿರುವ ಧರ್ಮವನ್ನು ಕೈಯ್ಕೊಂಡು ತಮ್ಮ ಜನ್ಮವನ್ನು ಸಾರ್ಥಕಗೊಳಿಸಿರಿ. ಧರ್ಮವು ಆತ್ಮನ ಸ್ವಭಾವ. ತಾವೀಗ ನಶ್ವರವಾದ ದೇಹವನ್ನು ಲಕ್ಷಿಸದೆ ಅದರಲ್ಲಿ ನೆಲಸಿರುವ ಆ ಶುದ್ಧಾತ್ಮನ ಗುಣದಲ್ಲೇ ಮನಸ್ಸನ್ನು ತಲ್ಲೀನ ಮಾಡಿರಿ. ಶರೀರವು ಆತ್ಮನಿಂದ ಭಿನ್ನವಾದುದು; ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳಿಂದ ಕೂಡಿದುದು; ರಸ, ರುಧಿರ, ಮಾಂಸ, ಮೇದ, ಅಸ್ಥಿ, ಮಜ್ಜಾ, ಶುಕ್ಲ ಎಂಬೀ ಸಪ್ತ ಧಾತುಮಯವಾದುದು. ಮಿಂಚಿನಂತೆ ತೋರಿ ಅಡಗುವ ಕೇವಲ ನಶ್ವರವಾದ ಈ ದೇಹದ ಮಮತೆಯನ್ನು ನೀಗಿ, ಅನಾದಿನಿಧನನೂ ಶುದ್ಧಚಿದಾನಂದ ಸ್ವರೂಪನೂ, ಸ್ಥಿರನೂ, ಮಂಗಲಾಂಗನೂ, ಅನಂತಗುಣಭರಿತನೂ, ಪರಮಾನಂದಮಯನೂ ಆದ ಪರಮಾತ್ಮನನ್ನೇ ಎಡೆಬಿಡದೆ ಧ್ಯಾನಿಸುತ್ತಿರಿ."

ಹೀಗೆ ಹೇಳುವಷ್ಟರಲ್ಲಿ ರಾತ್ರಿ ೧೦॥ ಗಂಟೆ ಹೊಡೆಯಲಿಕ್ಕಾಯಿತು. ಆಗ್ಗೆ ದೇಜಮ್ಮನವರು, "ನನಗಾಗಿ ತಾವು ಎಷ್ಟೋ ಆಯಾಸಪಟ್ಟಿರುವಿರಿ. ಈ ಮನುಷ್ಯಜೀವನದಲ್ಲಿ ತೀರ ಅಜ್ಞಾನದಿಂದ ನನ್ನಿಂದ ಸಂಭವಿಸಿರಬಹುದಾದ ಏನೂ ಅಪರಾಧಗಳಿದ್ದರೆ ಅವನ್ನು ಮರೆಯುವಿರಾ? ಆ ಬಗ್ಗೆ ನನ್ನನ್ನು ಕ್ಷಮಿಸುವಿರಾ?" ಎಂದು ಕಣ್ಣೀರು ತುಂಬಿ ಕೈಯ್ಮುಗಿದು ಬೇಡಿಕೊಂಡಾಗ, ಶೆಟ್ಟರು ಹಸನ್ಮುಖರಾಗಿ ಶಾಂತದೃಷ್ಟಿಯಿಂದ ಅವರನ್ನೇ ನೋಡಿದರು. ಇನ್ನುಳಿಯಿತೆಂದರೆ ಕೆಲವು ನಿಮಿಷಗಳಷ್ಟೇ ಎಂದು ಅಲ್ಲಿದ್ದವರಿಗೆ ತಿಳಿಯುತ್ತಲೆ, ದೇಜಮ್ಮನವರು "ಇನ್ನು ನಿಮ್ಮ ಆತ್ಮನಿಗೂ ನನ್ನ ಆತ್ಮನಿಗೂ ಸಂಬಂಧವಿಲ್ಲ, ಏಕೆಂದರೆ ನಿಮ್ಮ ಆತ್ಮನು ಈಗಲೇ ಬಿಟ್ಟು

ಹೋಗುವವನಿದ್ದಾನೆ. ಇನ್ನು ತಮ್ಮ ಮನಸ್ಸನ್ನು ಪಂಚಪರಮೇಷ್ಠಿಗಳ ಸ್ಮರಣೆಯಲ್ಲಿ ಇರಿಸಿರಿ, ಪೂರ್ವವಿದೇಹವನ್ನು ಮನವರಿಸಿಕೊಳ್ಳಿರಿ, ನಾನು ಹೇಳಿದ ಮಾತು ತಿಳಿಯಿತಷ್ಟೆ?" ಎಂದಾಗ, "ಹೌದು! ತಿಳಿಯದೆ ಏನು?" ಎಂದು ಮಲಗಿಕೊಂಡು, "ಇನ್ನು ನನಗೆ ಸನ್ಯಾಸವನ್ನು ಕೊಡಿರಿ" ಎಂದು ಹೇಳಿದರು. ಕೂಡಲೇ ಪಂಡಿತ ನೇಮಿರಾಜ ಶೆಟ್ಟರು "ನಿಮಗೆ ಒಂದು ಘಂಟೆಯ ಸನ್ಯಾಸವ್ರತವನ್ನು ಕೊಟ್ಟಿರುವೆನು" ಎಂದು ಹೇಳುವೊಡನೆ ಶ್ರೀವರ್ಮ ಶೆಟ್ಟರು ಪೂರ್ಣಭಕ್ತಿಯಿಂದ ಕೈಜೋಡಿಸಿ ತಮ್ಮ ತಲೆಯಲ್ಲಿ ಇಟ್ಟುಕೊಂಡರು. ಕೊನೆಗೊಮ್ಮೆ "ಈಗ ತಮಗೆ ಏನು ಕಾಣುತ್ತಿದೆ?" ಎಂದು ದೇಜಮ್ಮನವರು ಪುನಃ ಪ್ರಶ್ನಿಸಲು, "ಪೂರ್ವವಿದೇಹದಲ್ಲಿ ಮಂಗಳಸ್ವರೂಪನಿಗೆ ಮಹಾಪೂಜೆ ನಡೆಯುತ್ತಿರುವ ಆ ದಿವ್ಯ ಶಂಖನಾದ ಇಗೋ ನನಗೆ ಕಿವಿಯಾರೆ ಕೇಳಿಸುತ್ತಿದೆ!" ಎಂದು ಶೆಟ್ಟರು ಕೈಮುಗಿದು ಹೇಳುತ್ತಿರುವೊಂದಿಗೆ ಶರೀರಪಂಜರ ತಟ್ಟನೆ ತೆರೆಯಿತು, ಪ್ರಾಣಪಕ್ಷಿ ಪಕ್ಕನೆ ಹಾರಿಹೋಯಿತು! ಶ್ರೀವರ್ಮ ಶೆಟ್ಟರ ಆತ್ಮವು ಯಾವ ಅನಂತದಿಂದ ಅವತರಿಸಿತೊ ಆ ಅನಂತದಲ್ಲೇ ಅಂತರಿಸಿತು! ಆ ಆತ್ಮಕ್ಕೆ ಚಿರಶಾಂತಿ ಇರಲಿ!

ಸಾವಿಂಗಂಜಲದೇಕೆ? ಸಾವು ಪೆರತೇ ಮೆಯ್ವಾಳ್ದಿದರ್ಗಂಜಲಾ
ಸಾವೇಂ ಮಾಣ್ಗುಮೆ? ಕಾವರುಂಟೆ? ಅಕಟಾ! ಈ ಜೀವನೇನೆಂದುಮಂ ।
ಸಾವಂ ಕಂಡವನಲ್ಲವೇ? ಮರಣವಾಗಲ್ಕೊಂದದೇಂ ಪುಟ್ಟನೇ?
ನೀವೆನ್ನೊಳ್ನಿಲೆ ಸಾವುದುಂ ಸುಖವಲ್ತೆ? ರತ್ನಾಕರಾಧೀಶ್ವರಾ ॥ ೧೭ ॥

ಈ ಸಂದರ್ಭದಲ್ಲಿ ರನ್ನನ ಅಜಿತಪುರಾಣದಲ್ಲಿಯ (ಆಶ್ವಾಸ ೧೦) ಸಗರ ಚಕ್ರವರ್ತಿಯ ಉಪಾಖ್ಯಾನದಲ್ಲಿ ಬ್ರಾಹ್ಮಣನೊಬ್ಬನು ತನ್ನ "ಒರ್ವನುಳ್ಳ ಮಗನಂ ನಿಷ್ಕಾರಣಂ ನಿರ್ಘೃಣಂ ಜವನುಯ್ದಂ", ಆತನನ್ನು ಅಂತಕಪುರದಿಂದ ತನಗೆ ತಂದುಕೊಡೆಂದು ರಾಜಾಲಯದ್ವಾರದಲ್ಲಿ ಬಾಯಿಬಿಡು ಹುಯ್ಯಲಿಡುವುದನ್ನು ಕೇಳಿ, ಸಗರನು "ಸತ್ತರನೆತ್ತುವುದೆಂಬುದದೆತ್ತಣ ಮಾತು?" ಎಂದು ಚಿಂತಿಸುತ್ತಿರುವಲ್ಲಿ ಬುದ್ಧಿಸಾಗರನೆಂಬ ಆತನ ಪುರೋಹಿತನು ಆ ದ್ವಿಜನಿಗೆ "ಎಂದುಂ ತಮ್ಮೊಳೊರೋರ್ವರಪ್ಪೊಡಂ ಸತ್ತರಿಯದರ ಮನೆಯ ಪುಲ್ಲಂ ಕಿಚ್ಚುಮಂ ಕೊಂಡುಬರ್ಪುದು ಮೇಣ್ ಬರ್ಪೊಡಂ ನಿನ್ನ ಮಗನಂ ಪಡೆವೆನ್" ಎಂದು ಕಳುಹಿಸಲು, ಆ ವಿಪ್ರನು ಎಲ್ಲೆಲ್ಲಿ ಹೋದರೂ ಸಾಯದ ಮನೆಯನ್ನೂ ಕಾಣದೆ ಅಲ್ಲಿಯ ಹುಲ್ಲನ್ನೂ ಕಿಚ್ಚನ್ನೂ ತರಲಾರದೆ ಮರಳಿ ಬಂದಾಗ, ಆತನಿಗೆ ಆ ಪುರೋ

ಹಿತನು ಸಂಸಾರಸ್ವರೂಪವನ್ನು ಬೋಧಿಸಿ ಮಾಡಿದ ಉಪದೇಶದ ಈ ಮಾತುಗಳ—

ಪಗಲಿರುಳೆಳಚೊನ್ನಂ ಕಾಳವೆಂಬುಕ್ಕಿ ಚಿತ್ರಂ
ಬುಗೆ ನೆರೆದರಗಲ್ವರ್ ಪುಟ್ಟುವರ್ ಪೊಂದುವರ್ ನೀಂ ।
ಬಗೆಯ ಮರುಳೆ ಕಾಳಾಭೀಳವಕ್ತ್ರಾಂತಮಂ ದಲ್
ಪುಗದರೊಳರೆ ಪೇಳ್ ನಿಮ್ಮಜ್ಜಪಜ್ಜರ್ಕಳಾರುಂ ॥ ೨೦ ॥
ಮರೆವುದು ದುಃಖಮನರಿವಂ
ಮರೆವುದು ಸೈರಿಪುದು **ಮುಂತೆ ನೀಂ ಪೋಗಾನುಂ ।**
ಪೆರಗನೆ ಬಂದಪೆನೆಂಬೀ
ತೆರನಲ್ಲದೆ ಜವನ ಬಾರಿಯೊಳ್ ಬರ್ದುಕುವರಾರ್ ॥ ೨೧ ॥
ಆರಾರಂ ನುಂಗಿದನಿ
ಲ್ಲಾರಾರಂ ನೊಣೆದನಿಲ್ಲ ಸವಿನೋಡಿದನಿ ।
ಲ್ಲಾರಾರಂ ಸುರಮಾನವ
ನಾರಕತಿರ್ಯಕ್ಸಮೂಹಮಂ ಯಮರಾಜಂ ॥ ೨೨ ॥
ಬಡವಂ ಬಾಳ್ಗೆಂಗುಮೊ ಸಿರಿ
ಯೊಡೆಯಂ ಮಾಣ್ಗೆಂಗುಮೋ ತಪಸ್ವಿಗಳಿವರಂ ।
ಕಡೆಗಣಿಸುವೆನೆಂಗುಮೊ ಪೆ
ಣ್ಬಡೆಯೆಂಗುಮೊ ತುಳಿದು ಪರಿಗುಮಂತಕರಾಜಂ ॥ ೨೩ ॥
ಆಯು ನೆರವಿನೆಗಮಿರ್ಪನೆ
ಜಾಯೆಂಬನೆ ಮಾಣ್ಬನಿಂದಿನೊಂದಿವಸಮನ ।
ಧ್ಯಾಯಂ ಮಾಡುವನೆಂಬನೆ
ಬಾಯುಳಿದಳಿಯುಳೆ ಜನಂಗಳಂ ಜವನುಯ್ವಂ ॥ ೨೪ ॥
ಪನ್ನಿಪ್ಪರುಣಿಯೊ ಪಸುಮಗ
ನೆನ್ನದೆ ಮುತ್ತಾಣ್ಮನೆನ್ನದರಿವುಳ್ಳಂ ಬಾ ।
ಳ್ಗೆನ್ನದೆ ಮರುಳಕ್ಕಟ ಮಾ
ಣೆನ್ನದೆ ಮುಂಬಿಟ್ಟು ಕೊಂದಪಂ ಯಮರಾಜಂ ॥ ೨೫ ॥
ಕುಲಜಂ ಕುಲಹೀನನಿವಂ
ಕಲಿ ಪಂದೆಯಿವಂ ಮಹಾಭಿಮಾನಿಯಿವಂ ನಾ ।
ಣಿಲಿಯಿವನೆನ್ನದೆ ಪಲರಂ
ನಲಿನಲಿದಾಟಂದು ಕೊಂದಪಂ ಯಮರಾಜಂ ॥ ೨೬ ॥
ಆ ಜಗದೇಕಕಂಟಕನನಾ ಬಹುಭಕ್ಷಿಯನಾ ತ್ರಿಲೋಕಪಂ
ಕೇಜ ಸಮುತ್ಥ ಜೀವಮಕರಂದ ಮದಾಳಿಯನಾ ಪರಿಸ್ಫುರ ।

ತ್ರೀಜನನಂಗಜಾಂತಕನಮೋಹನಘಾಂತಕನಂತಕಾಂತಕಂ
ಶ್ರೀ ಜಿನರಾಜನಲ್ಲನುಳಿದೊಂ ಗೆಲಲಾರ್ಕುಮೆ
ಮೃತ್ಯುರಾಜನಂ ॥ ೩೦ ॥

ಹಠಾತ್ತಾಗಿ ನೆನಪಾಗುತ್ತಲೆ ಕ್ಷುಬ್ಧವಾದ ಮನಸ್ಸು, ಕುದಿದು ಉಕ್ಕಿ ಬರುವ ಹಾಲಿಗೆ ನೀರನ್ನು ಸಿಂಪಡಿಸಿದಂತೆ, ಒಮ್ಮೆ ಕೊಂಚ ಶಾಂತವಾಗುತ್ತದೆ. ಓಂ ಶಾಂತಿಃ ಶಾಂತಿಃ ಶಾಂತಿಃ!

ಗೋವಿಂದ ಪೈ.

ಮನ್ನಣೆ

ಕಳೆದ ವರ್ಷದ ನನ್ನ ಶಾಸ್ತ್ರದಾನದ ಪುಸ್ತಕವನ್ನು ಪ್ರಕಟಿಸಿದ ಬಗ್ಗೆ ಶ್ರೀ ಬಿ. ದಾಮೋದರ ಬಾಳಿಗರಿಗೂ, ಈ ವರ್ಷದ ಈ ಪುಸ್ತಕವನ್ನು ಪ್ರಕಟಿಸಿರುವ ಬಗ್ಗೆ ಶ್ರೀ ಕೋಟ ಶಿವರಾಮ ಕಾರಂತರಿಗೂ, ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಟ್ಟ ಶ್ರೀ ಗೋವಿಂದ ಪೈಯವರಿಗೂ ನಾನು ಅತ್ಯಂತ ಕೃತಜ್ಞಳಾಗಿರುತ್ತೇನೆ.

ಪಣಪಿಲ ಅರಮನೆ,
ತಾ. 20—9—1946

ಇತಿ

ದೇಜಮ್ಮ.

ಶ್ರೀಮದಮೃತಚಂದ್ರಸೂರಿವಿರಚಿತ

ಪುರುಷಾರ್ಥಸಿದ್ಧ್ಯುಪಾಯಃ

(ಜಿನಪ್ರವಚನರಹಸ್ಯ-ಕೋಶಃ)

ಅಥ ಸಮ್ಯಕ್ಚಾರಿತ್ರಂ (ಶೇಷಾಂಶಃ)

ಉಪಲಬ್ಧಸುಗತಿಸಾಧನಸಮಾಧಿಸಾರಸ್ಯ ಭೂಯಸೋಽಭ್ಯಾಸಾತ್ ।
ಸ್ವಗುರೋಃ ಶಿಷ್ಯೇಣ ಶಿರೋ ನ ಕರ್ತನೀಯಂ ಸುಧರ್ಮಮಭಿಲಷತಾ ॥ ೮೭ ॥
ಧನಲವಪಿಪಾಸಿತಾನಾಂ ವಿನೇಯವಿಶ್ವಾಸನಾಯ ದರ್ಶಯತಂ ।
ಝಟಿತಿ ಘಟಚಟಕಮೋಕ್ಷಂ ಶ್ರದ್ಧೇಯಂ ನೈವ ಖಾರಪಟಿಕಾನಾಂ ॥ ೮೮ ॥

ಸಮ್ಯಕ್ಚಾರಿತ್ರ (ಶೇಷಾಂಶ)

ಉತ್ತಮವಾದ ಧರ್ಮವನ್ನು ಬಯಸುವ ಶಿಷ್ಯನು ಅಧಿಕವಾದ ಅಭ್ಯಾಸದಿಂದ ಉತ್ತಮವಾದ ಗತಿಗೆ ಸಾಧನವಾಗಿರುವ ಸಮಾಧಿಯ ಸಾರವನ್ನು ಪಡೆದಿರುವ ತನ್ನ ಗುರುವಿನ ತಲೆಯನ್ನು ಕತ್ತರಿಸಬಾರದು. ಸಮಾಧಿಯಲ್ಲಿರುವ ಗುರುವಿನ ತಲೆಯನ್ನು ಕತ್ತರಿಸಿದರೆ ಆ ಗುರುವಿಗೆ ಸದ್ಗತಿಯಾಗುವುದೆಂಬ ಕುರುಡುನಂಬಿಕೆಯಿಂದ ಶಿಷ್ಯನು ತನ್ನ ಗುರುವಿನ ತಲೆಯನ್ನು ಕತ್ತರಿಸಬಾರದೆಂದೂ ಅದರಿಂದ ಗುರುವಿಗೆಂದೂ ಸದ್ಗತಿಯಾಗುವುದಿಲ್ಲವೆಂದೂ ಹಾಗೆ ಕತ್ತರಿಸಿದರೆ ಶಿಷ್ಯನು ಮಹಾಹಿಂಸಾದೋಷಕ್ಕೆ ಪಾತ್ರನಾಗುತ್ತಾನೆಂದೂ ಭಾವವು ॥ ೮೭ ॥ ಸ್ವಲ್ಪ ಧನದ ತೃಷ್ಣೆಯುಳ್ಳವರೂ ಶಿಷ್ಯರಿಗೆ ನಂಬಿಕೆಯನ್ನುಂಟುಮಾಡುವುದಕ್ಕೋಸ್ಕರ ಅದ್ಭುತ ಲೀಲೆಗಳನ್ನು ತೋರಿಸುವವರೂ ಆದ ಖಾರಪಟಿಕರೆಂಬ ಮಿಥ್ಯಾಸನ್ನ್ಯಾಸಿಗಳ, ಶೀಘ್ರವಾಗಿ ಮಡಕೆಯ ಗುಬ್ಬಚ್ಚಿಯ ಮೋಕ್ಷಕ್ಕೆ ಸಮಾನವಾದ ಮೋಕ್ಷವನ್ನು ನಂಬಲೇ ಬಾರದು. ಮಡಕೆಯ ಮೇಲೆ ಕುಳಿತಿರುವ ಗುಬ್ಬಚ್ಚಿಯು ಮಡಕೆಯೊಡೆದೊಡನೆಯೇ ಹಾರಿಹೋಗುವಂತೆ, ಪ್ರಾಣಿಯು ಶರೀರವನ್ನು ಬಿಟ್ಟೊಡನೆಯೇ ಮೋಕ್ಷವನ್ನು ಹೊಂದುತ್ತದೆಂಬ ಕಪಟ ಸನ್ನ್ಯಾಸಿಗಳ ಸುಳ್ಳುಮಾತನ್ನು ನಂಬಲೇ ಬಾರದೆಂದು ಭಾವವು ॥ ೮೮ ॥

ದಪ್ಯಾ್ವನಪರಂ ಪುರಸ್ತಾದಶನಾಯ ಕ್ಷಾಮಕುಕ್ಷಿಮಾಯಾಂತಂ ।
ನಿಜಮಾಂಸದಾನರಭಸಾದಾಲಭನೀಯೋ ನ ಚಾತ್ಮಾಪಿ ॥ ೮೯ ॥
ಕೋ ನಾಮ ವಿಶತಿ ಮೋಹಂ ನಯಭಂಗವಿಶಾರದಾನುಪಾಸ್ಯ ಗುರೂನ್ ।
ವಿದಿತಜಿನಮತರಹಸ್ಯಃ ಶ್ರಯನ್ನಹಿಂಸಾಂ ವಿಶುದ್ಧಮತಿಃ ॥ ೯೦ ॥
ಯದಿದಂ ಪ್ರಮಾದಯೋಗಾದಸದಭಿಧಾನಂ ವಿಧೀಯತೇ ಕಿಮಪಿ ।
ತದನೃತಮಪಿ ವಿಜ್ಞೇಯಂ ತದ್ಭೇದಾಃ ಸಂತಿ ಚತ್ವಾರಃ ॥ ೯೧ ॥
ಸ್ವಕ್ಷೇತ್ರಕಾಲಭಾವೈಃ ಸದಪಿ ಹಿ ಯಸ್ಮಿನ್ನಿಷಿದ್ಧ್ಯತೇ ವಸ್ತು ।
ತತ್ಪ್ರಥಮಮಸತ್ಯಂ ಸ್ಯಾನ್ನಾಸ್ತಿ ಯಥಾ ದೇವದತ್ತೋಽತ್ರ ॥ ೯೨ ॥

ಆಹಾರಕ್ಕೋಸ್ಕರ ತನ್ನ ಮುಂದೆ ಬರುತ್ತಿರುವುದೂ ಕೃಶವಾದ ಹೊಟ್ಟೆಯುಳ್ಳುದೂ ಆದ ಇತರ ಪ್ರಾಣಿಯನ್ನು ನೋಡಿ ಅದಕ್ಕೆ ತನ್ನ ಮಾಂಸದ ದಾನದ ಆತುರದಿಂದ ತನ್ನನ್ನೂ ಘಾತಮಾಡಿಕೊಳ್ಳಬಾರದು. ಪರಪ್ರಾಣಿಯನ್ನು ಘಾತಮಾಡದಿರುವುದು ಮಾತ್ರವಲ್ಲದೆ ತನ್ನನ್ನೂ ಘಾತಮಾಡಿಕೊಳ್ಳಬಾರದೆಂದೂ ಹಾಗೆ ಮಾಡಿಕೊಂಡರೆ ಆತ್ಮಹತ್ಯದೋಷಕ್ಕೆ ಪಾತ್ರನಾಗುತ್ತಾನೆಂದೂ ಭಾವವು ॥ ೮೯ ॥ ನಯಗಳ ಭೇದಗಳನ್ನು ತಿಳಿಯುವುದರಲ್ಲಿ ನಿಪುಣರಾದ ಗುರುಗಳನ್ನು ಉಪಾಸನೆ ಮಾಡಿ ಜಿನಮತದ ರಹಸ್ಯವನ್ನು ತಿಳಿದಿರುವ ಯಾವ ಪರಿಶುದ್ಧಬುದ್ಧಿಯುಳ್ಳವನು ತಾನೆ ಅಹಿಂಸಾಧರ್ಮವನ್ನು ಆಶ್ರಯಿಸಿದವನಾಗಿ ಭ್ರಮೆಯನ್ನು ಹೊಂದುವನು? ಭ್ರಮಿಸಿ ಪೂರ್ವೋಕ್ತಮಿಥ್ಯಾಮತಗಳಲ್ಲಿ ಯಾವ ವಿವೇಕಿಯೂ ನಂಬಿಕೆಯನ್ನಿಡಲಾರನೆಂದು ಭಾವವು ॥ ೯೦ ॥ ರಾಗದ್ವೇಷಾದಿಪ್ರಮಾದಕಷಾಯಯುಕ್ತವಾದ ಮನೋವಾಕ್ಕಾಯವ್ಯಾಪಾರದಿಂದ ಪ್ರೇರಿತನಾಗಿ ಇಲ್ಲದುದನ್ನು ಹೇಳುವುದಾವುದುಂಟೋ ಅದು ಅಸತ್ಯವೆಂದು ತಿಳಿಯಬೇಕು. ಆ ಅಸತ್ಯದ ಭೇದಗಳು ದ್ರವ್ಯ ಕ್ಷೇತ್ರ ಕಾಲ ಭಾವಗಳೆಂದು ನಾಲ್ಕು ಪ್ರಕಾರವಾಗಿರುತ್ತವೆ ॥ ೯೧ ॥ ಯಾವ ವಚನದಲ್ಲಿ ದ್ರವ್ಯ ಕ್ಷೇತ್ರ ಕಾಲ ಭಾವಗಳಿಂದ ಇರುವ ವಸ್ತುವೂ ನಿಷೇಧಿಸಲ್ಪಡುತ್ತದೋ ಅದು ಮೊದಲನೆಯ ಅಸತ್ಯವಚನವಾಗಿರುತ್ತದೆ. ಹೇಗೆಂದರೆ—ಇಲ್ಲಿ ದೇವದತ್ತನಿಲ್ಲ. ದೇವದತ್ತನು ಪರದ್ರವ್ಯ ಕ್ಷೇತ್ರ ಕಾಲ ಭಾವಗಳಿಂದ (ಪರಚತುಷ್ಟಯದಿಂದ) ಇಲ್ಲವಾದರೂ ಅವನು ದೇವದತ್ತ-ವಸ್ತುರೂಪದಲ್ಲಿ, ಅವನಿರುವ ಸ್ಥಳದಲ್ಲಿ, ಮೂಲವಸ್ತುವು ದೇವದತ್ತರೂಪದಲ್ಲಿ ಪರಿಣಮಿಸಿರುವ ಕಾಲದಲ್ಲಿ, ಜೀವದ ಸ್ವರೂಪದಲ್ಲಿ (ಸ್ವಚತುಷ್ಟಯದಲ್ಲಿ) ಇದ್ದಾನೆ. ಹಾಗಿದ್ದರೂ ಇಲ್ಲವೆನ್ನುವುದು ಮೊದಲನೆಯ ಅಸತ್ಯವಚನವಾಗಿರುತ್ತದೆಂದು

ಅಸದಪಿ ಹಿ ವಸ್ತುರೂಪಂ ಯತ್ರ ಪರಕ್ಷೇತ್ರಕಾಲಭಾವೈಸ್ತೈಃ ।
ಉದ್ಭಾವ್ಯತೇ ದ್ವಿತೀಯಂ ತದನೃತಮಸ್ಮಿನ್ ಯಥಾಸ್ತಿ ಘಟಃ ॥ ೯೩ ॥
ವಸ್ತು ಸದಪಿ ಸ್ವರೂಪಾತ್ ಪರರೂಪೇಣಾಭಿಧೀಯತೇ ಯಸ್ಮಿನ್ ।
ಅನೃತಮಿದಂ ಚ ತೃತೀಯಂ ವಿಜ್ಞೇಯಂ ಗೌರಿತಿ ಯಥಾಶ್ವಃ ॥ ೯೪ ॥
ಗರ್ಹಿತಮವದ್ಯಸಂಯುತಮಪ್ರಿಯಮಪಿ ಭವತಿ ವಚನರೂಪಂ ಯತ್ ।
ಸಾಮಾನ್ಯೇನ ತ್ರೇಧಾ ಮತಮಿದಮನೃತಂ ತುರೀಯಂ ತು ॥ ೯೫ ॥
ಪೈಶುನ್ಯಹಾಸಗರ್ಭಂ ಕರ್ಕಶಮಸಮಂಜಸಂ ಪ್ರಲಪಿತಂ ಚ ।
ಅನ್ಯದಪಿ ಯದುತ್ಸೂತ್ರಂ ತತ್ಸರ್ವಂ ಗರ್ಹಿತಂ ಗದಿತಂ ॥ ೯೬ ॥
ಛೇದನಭೇದನಮಾರಣಕರ್ಷಣವಾಣಿಜ್ಯಚೌರ್ಯವಚನಾದಿ ।
ತತ್ಸಾವದ್ಯಂ ಯಸ್ಮಾತ್ಪ್ರಾಣಿವಧಾದ್ಯಾಃ ಪ್ರವರ್ತಂತೇ ॥ ೯೭ ॥

ಭಾವವು ॥ ೯೨ ॥ ಪರದ್ರವ್ಯ ಕ್ಷೇತ್ರ ಕಾಲ ಭಾವಗಳಿಂದ ವಸ್ತುವು ಇಲ್ಲದಿದ್ದರೂ ಇದೆಯೆಂದು ಹೇಳುವುದು ಎರಡನೆಯ ಅಸತ್ಯವಚನವಾಗಿರುತ್ತದೆ. ಹೇಗೆಂದರೆ—ಈ ಸ್ಥಳದಲ್ಲಿ ಘಟವಿದೆ. ಘಟವಿಲ್ಲದಲ್ಲಿಯೂ ಇದೆಯೆಂದು ಹೇಳುವುದು ಎರಡನೆಯ ಅಸತ್ಯವಚನವಾಗಿರುತ್ತದೆಂದು ಭಾವವು ॥ ೯೩ ॥ ವಸ್ತುವು ಸ್ವದ್ರವ್ಯಕ್ಷೇತ್ರಾದಿ ಸ್ವರೂಪಚತುಷ್ಟಯದಿಂದಿದ್ದರೂ ಅದು ಪರರೂಪಚತುಷ್ಟಯದಿಂದಿದೆಯೆಂದು ಹೇಳುವ ವಚನವು ಮೂರನೆಯ ಅಸತ್ಯವಚನವಾಗಿರುತ್ತದೆಂದು ತಿಳಿಯಬೇಕು. ಹೇಗೆಂದರೆ—ಗೋವು ಕುದುರೆಯೆಂದು ಹೇಳುವುದು. ಒಂದು ವಸ್ತುವನ್ನು ಮತ್ತೊಂದು ವಸ್ತುವನ್ನಾಗಿ ಹೇಳುವುದೆಂದು ಭಾವವು ॥ ೯೪ ॥ ನಾಲ್ಕನೆಯ ಅಸತ್ಯವಚನವಾದರೋ ಸಾಮಾನ್ಯರೂಪದಿಂದ ಗರ್ಹಿತಾಸತ್ಯವಚನವೆಂದೂ ಅವದ್ಯಾಸತ್ಯವಚನವೆಂದೂ ಅಪ್ರಿಯಾಸತ್ಯವಚನವೆಂದೂ ಮೂರು ವಿಧವಾಗಿ ಅಭಿಮತವಾಗಿದೆ ॥ ೯೫ ॥ ದುಷ್ಟತೆಯಿಂದಲೂ ಹಾಸ್ಯದಿಂದಲೂ ಗರ್ಭಿತವಾಗಿರುವುದೂ ಕಠೋರವೂ ಅವ್ಯವಸ್ಥಿತವೂ ಆದ ಪೊಳ್ಳುಮಾತೂ ಶಾಸ್ತ್ರವಿರುದ್ಧವಾದ ಇತರ ವಚನವೆಲ್ಲವೂ ಗರ್ಹಿತಾಸತ್ಯವಚನವೆಂದು ಹೇಳಲ್ಪಟ್ಟಿದೆ ॥ ೯೬ ॥ ಕತ್ತರಿಸುವ, ತುಂಡುಮಾಡುವ, ಕೊಲ್ಲುವ, ಎಳೆಯುವ, ವ್ಯಾಪಾರಮಾಡುವ, ಕಳುವುಮಾಡುವ ಮಾತು ಮೊದಲಾದುದು ಸಾವದ್ಯಾಸತ್ಯವಚನವಾಗಿದೆ. ಅವದ್ಯ ಶಬ್ದಕ್ಕೆ ಪಾಪವೆಂದರ್ಥ. ಅದರಿಂದ ಪ್ರಾಣಿವಧೆ ಮೊದಲಾದ ಪಾಪಗಳುಂಟಾಗುತ್ತವೆ ॥ ೯೭ ॥ ಬೇರೆಯವರಿಗೆ ಅಪ್ರೀತಿಯನ್ನುಂಟುಮಾಡುವುದು, ಭಯವನ್ನುಂಟುಮಾಡುವುದು, ಖೇದವನ್ನುಂಟುಮಾಡು

ಅರತಿಕರಂ ಭೀತಿಕರಂ ಖೇದಕರಂ ವೈರಶೋಕಕಲಹಕರಂ ।
ಯದಪರಮಪಿ ತಾಪಕರಂ ಪರಸ್ಯ ತತ್ಸರ್ವಮಪ್ರಿಯಂ ಜ್ಞೇಯಂ ॥ ೯೮ ॥
ಸರ್ವಸ್ಮಿನ್ನಪ್ಯಸ್ಮಿನ್ಪ್ರಮತ್ತಯೋಗೈಕಹೇತುಕಥನಂ ಯತ್ ।
ಅನೃತವಚನೇಽಪಿ ತಸ್ಮಾನ್ನಿಯತಂ ಹಿಂಸಾ ಸಮವತರತಿ ॥ ೯೯ ॥
ಹೇತೌ ಪ್ರಮತ್ತಯೋಗೇ ನಿರ್ದಿಷ್ಟೇ ಸಕಲವಿತಥವಚನಾನಾಂ ।
ಹೇಯಾನುಷ್ಠಾನಾದೇರನುವದನಂ ಭವತಿ ನಾಸತ್ಯಂ ॥ ೧೦೦ ॥
ಭೋಗೋಪಭೋಗಸಾಧನಮಾತ್ರಂ ಸಾವದ್ಯಮಕ್ಷಮಾ ಮೋಕ್ತುಂ ।
ಯೇ ತೇಽಪಿ ಶೇಷಮನೃತಂ ಸಮಸ್ತಮಪಿ ನಿತ್ಯಮೇವ ಮುಂಚಂತು ॥ ೧೦೧ ॥
ಅವಿತೀರ್ಣಸ್ಯ ಗ್ರಹಣಂ ಪರಿಗ್ರಹಸ್ಯ ಪ್ರಮತ್ತಯೋಗಾದ್ಯತ್ ।
ತತ್ಪ್ರತ್ಯೇಯಂ ಸ್ತೇಯಂ ಸೈವ ಚ ಹಿಂಸಾ ವಧಸ್ಯ ಹೇತುತ್ವಾತ್ ॥ ೧೦೨ ॥

ವುದು, ವೈರವನ್ನೂ ಶೋಕವನ್ನೂ ಕಲಹವನ್ನೂ ಉಂಟುಮಾಡುವುದು, ಸಂತಾಪವನ್ನುಂಟುಮಾಡುವ ಬೇರೆ ಮಾತು ಇದೆಲ್ಲವೂ ಅಪ್ರಿಯಾಸತ್ಯ ವಚನನೆಂದು ತಿಳಿಯಬೇಕು ॥ ೯೮ ॥ ಮೇಲೆ ಹೇಳಲ್ಪಟ್ಟ ಈ ಎಲ್ಲಾ ಅಸತ್ಯವಚನಗಳಲ್ಲಿಯೂ ಪ್ರಮಾದವಿಶಿಷ್ಟವಾದ ಮನೋವಾಕ್ಕಾಯ ವ್ಯಾಪಾರವು ಮುಖ್ಯವಾಗಿರುವುದರಿಂದ ನಿಶ್ಚಯವಾಗಿ ಹಿಂಸಾದೋಷ ವುಂಟಾಗುತ್ತದೆ ॥ ೯೯ ॥ ಅಸತ್ಯವಚನಗಳಿಗೆಲ್ಲ ಪ್ರಮಾದವಿಶಿಷ್ಟವಾದ ಮನೋವಾಕ್ಕಾಯವ್ಯಾಪಾರರೂಪವಾದ ಯೋಗವು ಕಾರಣವೆಂದು ಹೇಳಲ್ಪಟ್ಟಿದೆ. ಆದರೆ ಹೇಯವಾದುದನ್ನು ಬಿಡಬೇಕೆಂದೂ ಉಪಾದೇಯ ವಾದುದನ್ನು ಪರಿಗ್ರಹಿಸಬೇಕೆಂದೂ ಹೇಳುವುದು ಅಸತ್ಯವಚನವಾಗುವು ದಿಲ್ಲ. ಹೇಯವನ್ನು ತ್ಯಜಿಸಬೇಕೆಂದೂ ಉಪಾದೇಯವನ್ನು ಪರಿಗ್ರಹಿಸ ಬೇಕೆಂದೂ ಹೇಳಿದರೂ ಕೆಲವರ ಮನಸ್ಸಿಗೆ ನೋವಾಗಬಹುದಾದರೂ ಹಾಗೆ ಹೇಳುವುದರಿಂದ ಅಸತ್ಯವಚನದ ದೋಷವುಂಟಾಗುವುದಿಲ್ಲವೆಂದು ಭಾವವು ॥ ೧೦೦ ॥ ಭೋಗೋಪಭೋಗಸಾಧನಗಳನ್ನು ಸಂಗ್ರಹಿಸಿಕೊಳ್ಳು ವುದಕ್ಕಾಗಿ ಮಾತ್ರ ಸಾವದ್ಯ-ಪಾಪಯುಕ್ತವಾದ ಅಸತ್ಯವಚನವನ್ನು ಬಿಡುವುದಕ್ಕೆ ಅಸಮರ್ಥರಾಗಿರುವರೂ ಉಳಿದ ಎಲ್ಲಾ ಅಸತ್ಯವಚನ ವನ್ನು ಯಾವಾಗಲೂ ಬಿಡಬೇಕು. ಗೃಹಸ್ಥ-ಶ್ರಾವಕರು ಅಸತ್ಯವಚನ ವನ್ನೆಲ್ಲ ಬಿಡುವುದಕ್ಕೆ ಅಸಮರ್ಥರಾಗಿ ಭೋಗೋಪಭೋಗಸಾಧನಗಳಿ ಗೋಸ್ಕರ ಅಸತ್ಯವನ್ನು ನುಡಿಯಬೇಕಾಗಿ ಬರುವುದಾದರೂ ಉಳಿದ ಅಸತ್ಯವಚನವನ್ನಾದರೂ ತ್ಯಜಿಸಬೇಕೆಂದು ಭಾವವು॥ ೧೦೧ ॥ ಪ್ರಮಾದ ವಿಶಿಷ್ಟವಾದ ಮನೋವಾಕ್ಕಾಯವ್ಯಾಪಾರದಿಂದ ತನಗೆ ಕೊಡಲ್ಪಡ

ಅರ್ಥಾ ನಾಮ ಯ ಏತೇ ಪ್ರಾಣಾ ಏತೇ ಬಹಿಶ್ಚರಾಃ ಪುಂಸಾಂ ।
ಹರತಿ ಸ ತಸ್ಯ ಪ್ರಾಣಾನ್ ಯೋ ಯಸ್ಯ ಜನೋ ಹರತ್ಯರ್ಥಾನ್ ॥ ೧೦೩ ॥
ಹಿಂಸಾಯಾಃ ಸ್ತೇಯಸ್ಯ ಚ ನಾವ್ಯಾಪ್ತಿಃ ಸುಘಟಮೇವ ಸಾ ಯಸ್ಮಾತ್ ।
ಗ್ರಹಣೇ ಪ್ರಮತ್ತಯೋಗೋ ದ್ರವ್ಯಸ್ಯ ಸ್ವೀಕೃತಸ್ಯಾನ್ಯೈಃ ॥ ೧೦೪ ॥
ನಾತಿವ್ಯಾಪ್ತಿಶ್ಚ ತಯೋಃ ಪ್ರಮತ್ತಯೋಗೈಕಕಾರಣವಿರೋಧಾತ್ ।
ಅಪಿ ಕರ್ಮಾನುಗ್ರಹಣೇ ನೀರಾಗಾಣಾಮವಿದ್ಯಮಾನತ್ವಾತ್ ॥ ೧೦೫ ॥

ದಿರುವ ಧನಧಾನ್ಯಸುವರ್ಣಾದಿ ಪರಿಗ್ರಹವನ್ನು ಗ್ರಹಣಮಾಡುವುದು ಕಳುವೆಂದು ತಿಳಿಯಬೇಕು. ವಧೆಗೆ ಕಾರಣವಾಗಿರುವುದರಿಂದ ಅದೇ ಹಿಂಸೆಯಾಗಿರುತ್ತದೆ. ಕಳುವು ಮಾಡಲ್ಪಡುವ ಪದಾರ್ಥಗಳ ಯಜಮಾನನ ಬಾಹ್ಯಪ್ರಾಣರೂಪವಾದ ಆ ಪದಾರ್ಥಗಳನ್ನು ಕಳುವು ಮಾಡುವುದರಿಂದ ಅವನ ಭಾವಪ್ರಾಣದ ವಧೆಯೂ ಕಳುವು ಮಾಡುವವನ ಭಾವಪ್ರಾಣದ ವಧೆಯೂ ಆಗುವುದೆಂದೂ ಅದೇ ಹಿಂಸೆಯೆಂದೂ ಭಾವವು ॥ ೧೦೨ ॥ ಈ ಧನಧಾನ್ಯಾದಿಪದಾರ್ಥಗಳಾದರೋ ಪುರುಷರ ಹೊರಗೆ ಸಂಚರಿಸುವ ಪ್ರಾಣಗಳಾಗಿರುತ್ತವೆ. ಈ ಬಾಹ್ಯ ಪ್ರಾಣಗಳನ್ನು ಹರಣ ಮಾಡುವವನು ಇವುಗಳ ಯಜಮಾನನ ಪ್ರಾಣಗಳನ್ನೇ ಹರಣಮಾಡುತ್ತಾನೆ. ಕಳುವು ಮಾಡುವವನು ಪ್ರಾಣಘಾತ ದೋಷಕ್ಕೆ ಪಾತ್ರನಾಗುತ್ತಾನೆಂದು ಭಾವವು ॥ ೧೦೩ ॥ ಬೇರೆಯವರು ಸ್ವೀಕರಿಸಿರುವ ಪದಾರ್ಥವನ್ನು ಗ್ರಹಣಮಾಡುವುದರಲ್ಲಿ—ಕದಿಯುವುದರಲ್ಲಿ ಪ್ರಮಾದಯುಕ್ತವಾದ ಮನೋವಾಕ್ಕಾಯವ್ಯಾಪಾರವಿರುವುದರಿಂದ ಹಿಂಸೆಗೂ ಕಳುವಿಗೂ ಅವ್ಯಾಪ್ತಿಯಿಲ್ಲ. ಪ್ರಮಾದಯೋಗರೂಪವಾದ ಲಕ್ಷಣದ ವ್ಯಾಪ್ತಿಯು ಹಿಂಸೆಯಲ್ಲಿಯೂ ಕಳುವಿನಲ್ಲಿಯೂ ಸಮಾನವಾಗಿಯೇ ಘಟನೆಯಾಗುತ್ತದೆಂದು ಭಾವವು ॥ ೧೦೪ ॥ ರಾಗರಹಿತರಾದ ಎಂದರೆ ದರ್ಶನಮೋಹನೀಯ ಚಾರಿತ್ರಮೋಹನೀಯ ಕರ್ಮರಹಿತರಾದ ಕೇವಲಿಗಳಿಗೆ ಪ್ರಮಾದಯುಕ್ತ ಮನೋವಾಕ್ಕಾಯವ್ಯಾಪಾರರೂಪವಾದ ಮುಖ್ಯ ಕಾರಣವಿಲ್ಲದಿರುವುದರಿಂದ ಅವರು ದ್ರವ್ಯಕರ್ಮನೋಕರ್ಮಪುದ್ಗಲಗಳನ್ನು ಗ್ರಹಣಮಾಡುತ್ತಿದ್ದರೂ ಅವರಿಗೆ ಕಳುವಿನ ದೋಷವಿಲ್ಲದಿರುವುದರಿಂದಲೂ ಅವರಲ್ಲಿ ಪ್ರಮಾದಯೋಗರೂಪವಾದ ಚೌರ್ಯಲಕ್ಷಣವು ಘಟಿತವಾಗದಿರುವುದರಿಂದಲೂ ಅತಿವ್ಯಾಪ್ತಿದೋಷವೂ ಇಲ್ಲ. ಅಲಕ್ಷ್ಯರಾದ ಕೇವಲಿಗಳಲ್ಲಿಯೂ ಕಳುವಿನ ಲಕ್ಷಣವು ಘಟಿತವಾಗಿದ್ದರೆ ಅತಿವ್ಯಾಪ್ತಿದೋಷವುಂಟಾಗುತ್ತಿದ್ದಿತೆಂದೂ ಅವರಲ್ಲಿ ಆ ಲಕ್ಷಣವು ಘಟಿತ

ಅಸಮರ್ಥಾ ಯೇ ಕರ್ತುಂ ನಿಪಾನತೋಯಾದಿಹರಣವಿನಿವೃತ್ತಿಂ ।
ತೈರಪಿ ಸಮಸ್ತಮಪರಂ ನಿತ್ಯಮದತ್ತಂ ಪರಿತ್ಯಾಜ್ಯಂ ॥ ೧೦೬ ॥
ಯದ್ವೇದರಾಗಯೋಗಾನ್ಮೈಥುನಮಭಿಧೀಯತೇ ತದಬ್ರಹ್ಮ ।
ಅವತರತಿ ತತ್ರ ಹಿಂಸಾ ವಧಸ್ಯ ಸರ್ವತ್ರ ಸದ್ಭಾವಾತ್ ॥ ೧೦೭ ॥
ಹಿಂಸ್ಯಂತೇ ತಿಲನಾಲ್ಯಾಂ ತಪ್ತಾಯಸಿ ವಿನಿಹಿತೇ ತಿಲಾ ಯದ್ವತ್ ।
ಬಹವೋ ಜೀವಾ ಯೋನೌ ಹಿಂಸ್ಯಂತೇ ಮೈಥುನೇ ತದ್ವತ್ ॥ ೧೦೮ ॥
ಯದಪಿ ಕ್ರಿಯತೇ ಕಿಂಚಿನ್ಮದನೋದ್ರೇಕಾದನಂಗರಮಣಾದಿ ।
ತತ್ರಾಪಿ ಭವತಿ ಹಿಂಸಾ ರಾಗಾದ್ಯುತ್ಪತ್ತಿತಂತ್ರತ್ವಾತ್ ॥ ೧೦೯ ॥

ವಾಗದಿರುವುದರಿಂದ ಅತಿವ್ಯಾಪ್ತಿದೋಷವಿಲ್ಲವೆಂದೂ ಭಾವವು ॥ ೧೦೫ ॥ ಬೇರೆಯವರ ಕೆರೆಬಾವಿಗಳ ನೀರು ಮೊದಲಾದ ಪದಾರ್ಥಗಳನ್ನು ತ್ಯಜಿಸುವುದಕ್ಕೆ ಶಕ್ತಿಯಿಲ್ಲದವರು ತಮಗೆ ಕೊಡಲ್ಪಡದಿರುವ ಇತರ ಪದಾರ್ಥವನ್ನೆಲ್ಲ ಯಾವಾಗಲೂ ತ್ಯಜಿಸಬೇಕು. ಲೋಕದಲ್ಲಿ ಯಾವ ಪದಾರ್ಥಗಳನ್ನು ಗ್ರಹಣಮಾಡಿದರೆ ಕಳುವೆಂದು ವ್ಯವಹಾರವಿಲ್ಲವೋ ಅಂತಹ ನೀರು ಮಣ್ಣು ಮೊದಲಾದ ವಸ್ತುಗಳನ್ನು ತ್ಯಜಿಸುವುದಕ್ಕೆ ಶಕ್ತಿಯಿಲ್ಲದ ಅಣುವ್ರತಿ-ಶ್ರಾವಕನು ಇತರ ಪದಾರ್ಥಗಳನ್ನು ಯಾವಾಗಲೂ ತ್ಯಜಿಸಲೇ ಬೇಕೆಂದು ಭಾವವು ॥ ೧೦೬ ॥ ಸ್ತ್ರೀ ಪುರುಷ ನಪುಂಸಕ ವೇದಗಳ ಪ್ರೀತಿ ರೂಪವಾದ ಯೋಗದಿಂದುಂಟಾಗುವ ಸ್ತ್ರೀಪುರುಷಸಂಯೋಗಕ್ಕೆ ಮೈಥುನವೆಂದೂ ಅಬ್ರಹ್ಮಚರ್ಯವೆಂದೂ ಹೆಸರು. ಅದರಲ್ಲಿ ದ್ರವ್ಯಪ್ರಾಣ ಭಾವಪ್ರಾಣಘಾತರೂಪವಾದ ಹಿಂಸೆಯು ಎಲ್ಲೆಲ್ಲಿಯೂ ಉಂಟಾಗುವುದು. ಸಂಭೋಗದಿಂದ ಸ್ತ್ರೀಯೋನಿಯಲ್ಲಿರುವ ಅನೇಕ ಸಮ್ಮೂರ್ಛನಜೀವಗಳ ಘಾತರೂಪವಾದ ದ್ರವ್ಯಹಿಂಸೆಯೂ ಸ್ತ್ರೀಪುರುಷೋಭಯರ ಮನೋಭಾವಗಳ ಘಾತರೂಪವಾದ ಭಾವಹಿಂಸೆಯೂ ಸರ್ವತ್ರ ಉಂಟಾಗುವುದೆಂದು ಭಾವವು ॥ ೧೦೭ ॥ ಎಳ್ಳು ತುಂಬಿರುವ ಕೊಳವೆಯಲ್ಲಿ ಕಾಯಿಸಿದ ಕಬ್ಬಿಣದ ಹಾರೆಯನ್ನು ಸೇರಿಸಿದರೆ ಆ ಎಳ್ಳುಗಳು ಹೇಗೆ ಹಿಂಸಿಸಲ್ಪಡುತ್ತವೋ—ಚಟ್‌ಪಟ್ ಎಂದು ಹುರಿಯಲ್ಪಡುತ್ತವೋ ಹಾಗೆ ಮೈಥುನವನ್ನು ಮಾಡುವುದರಿಂದ ಯೋನಿಯಲ್ಲಿರುವ ಅನೇಕ ಸಮ್ಮೂರ್ಛನ-ಸೂಕ್ಷ್ಮಜೀವಗಳು ಹಿಂಸಿಸಲ್ಪಡುತ್ತವೆ ॥ ೧೦೮ ॥ ಕಾಮದ ಉದ್ರೇಕದಿಂದ ಮಾಡುವ ಮುಷ್ಟಿಮೈಥುನಾದಿ ಅನಂಗಕ್ರೀಡೆ ಮೊದಲಾದುದರಲ್ಲಿಯೂ ರಾಗಾದಿವಿಕಾರಭಾವಗಳುಂಟಾಗುವುದರಿಂದ ಹಿಂಸೆಯಾಗುವುದು. ಭಾವಹಿಂಸೆಯಾಗುವುದೆಂದು ಭಾವವು ॥ ೧೦೯ ॥ ಮೋಹದ ನಿಮಿತ್ತದಿಂದ

ಯೇ ನಿಜಕಲತ್ರಮಾತ್ರಂ ಪರಿಹರ್ತುಂ ಶಕ್ನುವಂತಿ ನ ಹಿ ಮೋಹಾತ್ ।
ನಿಃಶೇಷಶೇಷಯೋಷಿನ್ನಿಷೇವಣಂ ತೈರಪಿ ನ ಕಾರ್ಯಂ ॥ ೧೧೦ ॥
ಯಾ ಮೂರ್ಛಾ ನಾಮೇಯಂ ವಿಜ್ಞಾತವ್ಯಃ ಪರಿಗ್ರಹೋ ಹ್ಯೇಷಃ ।
ಮೋಹೋದಯಾದುದೀರ್ಣೋ ಮೂರ್ಛಾ ತು ಮಮತ್ವಪರಿಣಾಮಃ ॥ ೧೧೧ ॥
ಮೂರ್ಛಾಲಕ್ಷಣಕರಣಾತ್ ಸುಘಟಾ ವ್ಯಾಪ್ತಿಃ ಪರಿಗ್ರಹತ್ವಸ್ಯ ।
ಸಗ್ರಂಥೋ ಮೂರ್ಛಾವಾನ್ ವಿನಾಪಿ ಕಿಲ ಶೇಷಸಂಗೇಭ್ಯಃ ॥ ೧೧೨ ॥

ತಮ್ಮ ಪತ್ನಿಯ ಸಹವಾಸ-ಸಂಭೋಗವನ್ನೂ ಬಿಡುವುದಕ್ಕೆ ಅಶಕ್ತರಾಗಿರುವವರು ಉಳಿದ ಎಲ್ಲಾ ಸ್ತ್ರೀಯರ ಸಹವಾಸ-ಸಂಭೋಗವನ್ನಾದರೂ ಬಿಡಲೇ ಬೇಕು ॥ ೧೧೦ ॥ ಮೋಹನೀಯಕರ್ಮದ ಉದಯದಿಂದುಂಟಾದ "ಇದು ನನ್ನದು" ಎಂಬೀ ರೂಪವಾದ ಪರಿಣಾಮ-ಮನೋಭಾವವೇ ಮೂರ್ಛೆಯಾಗಿರುತ್ತದೆ. ಈ ಮೂರ್ಛೆಯೇ ಪರಿಗ್ರಹವೆಂದು ತಿಳಿಯಬೇಕು. ಮೆಯ್ಮರೆತಿರುವ ಅವಸ್ಥೆಗೂ ಮೂರ್ಛೆಯೆಂದು ಹೆಸರಿರುವುದಾದರೂ ಪ್ರಕೃತದಲ್ಲಿ ಮೂರ್ಛೆಯೆಂದರೆ ಪರಿಗ್ರಹವೆಂದು ಭಾವವು ॥ ೧೧೧ ॥ ಮೂರ್ಛೆಯು ಪರಿಗ್ರಹತ್ವದ ಲಕ್ಷಣವೆಂದು ಹೇಳಿದುದರಿಂದ ಲಕ್ಷ್ಯಲಕ್ಷಣಗಳ ವ್ಯಾಪ್ತಿಯು ಚೆನ್ನಾಗಿ ಹೊಂದಿಕೆಯಾಗುತ್ತದೆ. ಉಳಿದ ಪರಿಗ್ರಹಗಳಿಲ್ಲದಿದ್ದರೂ ಮೂರ್ಛಾಭಾವವುಳ್ಳವನು ನಿಶ್ಚಯವಾಗಿ ಪರಿಗ್ರಹವುಳ್ಳವನಾಗಿರುತ್ತಾನೆ. ಮೂರ್ಛಾರೂಪವಾದ ಲಕ್ಷಣವಿರುವಲ್ಲೆಲ್ಲ ಪರಿಗ್ರಹರೂಪವಾದ ಲಕ್ಷ್ಯವಿರುತ್ತದೆಂದೂ ಆ ಲಕ್ಷ್ಯಲಕ್ಷಣಗಳ ಹೊಂದಿಕೆಯು ಚೆನ್ನಾಗಿದೆಯೆಂದೂ ಧನಧಾನ್ಯಾದಿಬಾಹ್ಯಪರಿಗ್ರಹಗಳಿಲ್ಲದಿದ್ದರೂ ಮೋಹನೀಯಕರ್ಮದ ಪ್ರಾದುರ್ಭಾವದಿಂದುಂಟಾದ ಮಮತ್ವಭಾವರೂಪವಾದ ಮೂರ್ಛೆಯುಳ್ಳವನು ಪರಿಗ್ರಹವುಳ್ಳವನಾಗಿರುತ್ತಾನೆಂದೂ ಭಾವವು ॥ ೧೧೨ ॥ ಹೀಗೆ ಮೂರ್ಛೆಯೇ ಪರಿಗ್ರಹವಾಗುವುದಾದರೆ ಧನಧಾನ್ಯಾದಿ ಬಾಹ್ಯವಸ್ತುವಾವುದೂ ಪರಿಗ್ರಹವಲ್ಲವೆಂದಾಯ್ತು. ಹೀಗೆ ಸಂದೇಹವುಂಟಾದರೆ ಇದಕ್ಕೆ ಸಮಾಧಾನವೇನೆಂದರೆ—ಬಾಹ್ಯಪರಿಗ್ರಹವು ಮೂರ್ಛೆಗೆ ವಿಶೇಷವಾಗಿ ನಿಮಿತ್ತತೆಯನ್ನು ಹೊಂದುವುದರಿಂದ ಈ ಧನಧಾನ್ಯಾದಿ ಬಾಹ್ಯವಸ್ತುವೂ ಪರಿಗ್ರಹವಾಗಿರುತ್ತದೆ. ಕಾರಣದಲ್ಲಿ ಕಾರ್ಯದ ಉಪಚಾರದಿಂದ ಬಾಹ್ಯವಸ್ತುರೂಪವಾದ ಕಾರಣವೂ ಪರಿಗ್ರಹರೂಪವಾದ ಕಾರ್ಯವೆಂದು ಹೇಳಲ್ಪಡುವುದೆಂದು ಭಾವವು ॥ ೧೧೩ ॥ ಹೀಗೆ ಬಾಹ್ಯಪದಾರ್ಥವು ಪರಿಗ್ರಹವಾಗುವುದಾದರೆ ಕಷಾಯರಹಿತರಾದ ವೀತರಾಗರಿಗೆ ಬಾಹ್ಯಕರ್ಮಪರಮಾಣುಗಳ ಗ್ರಹಣ

ಯದ್ಯೇವಂ ಭವತಿ ತದಾ ಪರಿಗ್ರಹೋ ನ ಖಲು ಕೋಽಪಿ ಬಹಿರಂಗಃ ।
ಭವತಿ ನಿತರಾಂ ಯತೋಽಸೌ ಧತ್ತೇ ಮೂರ್ಛಾನಿಮಿತ್ತತ್ವಂ ॥ ೧೧೩ ॥
ಏವಮತಿವ್ಯಾಪ್ತಿಃ ಸ್ಯಾತ್ಪರಿಗ್ರಹಸ್ಯೇತಿ ಚೇದ್ಭವೇನ್ನೈವಂ ।
ಯಸ್ಮಾದಕಷಾಯಾಣಾಂ ಕರ್ಮಗ್ರಹಣೇ ನ ಮೂರ್ಛಾಸ್ತಿ ॥ ೧೧೪ ॥
ಅತಿಸಂಕ್ಷೇಪಾದ್ದ್ವಿವಿಧಃ ಸ ಭವೇದಾಭ್ಯಂತರಶ್ಚ ಬಾಹ್ಯಶ್ಚ ।
ಪ್ರಥಮಶ್ಚತುರ್ದಶವಿಧೋ ಭವತಿ ದ್ವಿವಿಧೋ ದ್ವಿತೀಯಸ್ತು ॥ ೧೧೫ ॥
ಮಿಥ್ಯಾತ್ವವೇದರಾಗಾಸ್ತಥೈವ ಹಾಸ್ಯಾದಯಶ್ಚ ಷಡ್ದೋಷಾಃ ।
ಚತ್ವಾರಶ್ಚ ಕಷಾಯಾಶ್ಚತುರ್ದಶಾಭ್ಯಂತರಾ ಗ್ರಂಥಾಃ ॥ ೧೧೬ ॥
ಅಥ ನಿಶ್ಚಿತ್ತಸಚಿತ್ತಾ ಬಾಹ್ಯಸ್ಯ ಪರಿಗ್ರಹಸ್ಯ ಭೇದೌ ದ್ವೌ ।
ನೈಷಃ ಕದಾಪಿ ಸಂಗಃ ಸರ್ವೋಽಪ್ಯತಿವರ್ತತೇ ಹಿಂಸಾಂ ॥ ೧೧೭ ॥
ಉಭಯಪರಿಗ್ರಹವರ್ಜನಮಾಚಾರ್ಯಾಃ ಸೂಚಯಂತ್ಯಹಿಂಸೇತಿ ।
ದ್ವಿವಿಧಪರಿಗ್ರಹವಹನಂ ಹಿಂಸೇತಿ ಜಿನಪ್ರವಚನಜ್ಞಾಃ ॥ ೧೧೮ ॥

ವಾಗುವುದರಿಂದ ಅಲಕ್ಷ್ಯದಲ್ಲಿ ಪರಿಗ್ರಹದ ಲಕ್ಷಣವು ಅನ್ವಯಿಸಿ ಅತಿವ್ಯಾಪ್ತಿದೋಷವು ಸಂಭವಿಸುವುದೆಂದರೆ ಕಷಾಯರಹಿತರಾದ ವೀತರಾಗರಿಗೆ ಕರ್ಮಪರಮಾಣುಗಳ ಗ್ರಹಣವಾಗುತ್ತಿದ್ದರೂ ಮೂರ್ಛಾಪರಿಣಾಮವಿಲ್ಲದಿರುವುದರಿಂದ ಅವರಲ್ಲಿ ಪರಿಗ್ರಹಭಾವವಿಲ್ಲ. ಅತಿವ್ಯಾಪ್ತಿದೋಷವಿಲ್ಲವೆಂದು ಭಾವವು ॥ ೧೧೪ ॥ ಆ ಪರಿಗ್ರಹವು ಬಹುಸಂಕ್ಷೇಪದಿಂದ ಅಭ್ಯಂತರಪರಿಗ್ರಹವೆಂದೂ ಬಾಹ್ಯಪರಿಗ್ರಹವೆಂದೂ ಎರಡು ಪ್ರಕಾರವಾಗಿರುವುದು. ಅವುಗಳಲ್ಲಿ ಅಭ್ಯಂತರಪರಿಗ್ರಹವು, ಮುಂದಿನ ಶ್ಲೋಕದಲ್ಲಿ ಹೇಳುವಂತೆ, ಹದಿನಾಲ್ಕು ಪ್ರಕಾರವಾಗಿಯೂ ಎರಡನೆಯ—ಬಾಹ್ಯಪರಿಗ್ರಹವು ಎರಡು ಪ್ರಕಾರವಾಗಿಯೂ ಇರುವುದು ॥ ೧೧೫ ॥ ಮಿಥ್ಯಾತ್ವ, ಸ್ತ್ರೀವೇದರಾಗ, ಪುಂವೇದರಾಗ, ನಪುಂಸಕವೇದರಾಗ, ಹಾಗೆಯೇ ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸಾ-ಗ್ಲಾನಿಗಳೆಂಬ ಆರು ದೋಷಗಳು, ಕ್ರೋಧ, ಮಾನ, ಮಾಯಾ, ಲೋಭಗಳೆಂಬ ಕಷಾಯಭಾವಗಳು ನಾಲ್ಕು ಸೇರಿ ಅಭ್ಯಂತರಪರಿಗ್ರಹಗಳು ಹದಿನಾಲ್ಕು ಪ್ರಕಾರವಾಗಿರುತ್ತವೆ ॥ ೧೧೬ ॥ ಆ ಮೇಲೆ ಬಾಹ್ಯಪರಿಗ್ರಹದ ಭೇದಗಳು ನಿಶ್ಚಿತ್ತ (ಜಡ)ವೆಂದೂ ಸಚಿತ್ತವೆಂದೂ ಎರಡು ಪ್ರಕಾರವಾಗಿರುತ್ತವೆ. ಈ ಪರಿಗ್ರಹವೆಲ್ಲವೂ ಹಿಂಸೆಯನ್ನೆಂದೂ ಮೀರುವುದಿಲ್ಲ. ಈ ಎಲ್ಲಾ ಪರಿಗ್ರಹಗಳು ಹಿಂಸೆಯಲ್ಲಿ ಅಡಕವಾಗುತ್ತವೆಂದು ಭಾವವು ॥ ೧೧೭ ॥ ಜೈನಾಗಮವನ್ನು ತಿಳಿದ ಆಚಾರ್ಯರು ಮೇಲೆ ಹೇಳಲ್ಪಟ್ಟ ಬಾಹ್ಯಾಭ್ಯಂತರ

ಹಿಂಸಾಪರ್ಯಾಯತ್ವಾತ್ಸಿದ್ಧಾ ಹಿಂಸಾಂತರಂಗಸಂಗೇಷು ।
ಬಹಿರಂಗೇಷು ತು ನಿಯತಂ ಪ್ರಯಾತು ಮೂರ್ಛೈವ ಹಿಂಸಾತ್ವಂ ॥ ೧೧೯ ॥
ಏವಂ ನ ವಿಶೇಷಃ ಸ್ಯಾದುಂದುರರಿಪುಹರಿಣಶಾಬಕಾದೀನಾಂ ।
ನೈವಂ ಭವತಿ ವಿಶೇಷಸ್ತೇಷಾಂ ಮೂರ್ಛಾವಿಶೇಷೇಣ ॥ ೧೨೦ ॥
ಹರಿತತೃಣಾಂಕುರಚಾರಿಣಿ ಮಂದಾ ಮೃಗಶಾಬಕೇ ಭವತಿ ಮೂರ್ಛಾ ।
ಉಂದುರನಿಕರೋನ್ಮಾಥಿನಿ ಮಾರ್ಜಾರೇ ಸೈವ ಜಾಯತೇ ತೀವ್ರಾ ॥ ೧೨೧ ॥
ನಿರ್ಬಾಧಂ ಸಂಸಿಧ್ಯೇತ್ಕಾರ್ಯವಿಶೇಷೋ ಹಿ ಕಾರಣವಿಶೇಷಾತ್ ।
ಔಧಸ್ಯ ಖಂಡಯೋರಿವ ಮಾಧುರ್ಯಪ್ರೀತಿಭೇದ ಇವ ॥ ೧೨೨ ॥

ಪರಿಗ್ರಹಗಳ ತ್ಯಾಗವನ್ನು ಅಹಿಂಸೆಯನ್ನಾಗಿಯೂ ಆ ಪರಿಗ್ರಹಗಳ ಆಚರಣವನ್ನು ಹಿಂಸೆಯನ್ನಾಗಿಯೂ ಸೂಚಿಸುತ್ತಾರೆ. ಆ ಉಭಯಪರಿಗ್ರಹಗಳ ತ್ಯಾಗವೇ ಅಹಿಂಸೆಯೆಂದೂ ಅವುಗಳ ಆಚರಣವೇ ಹಿಂಸೆಯೆಂದೂ ಭಾವವು ॥ ೧೧೮ ॥ ಅಂತರಂಗಪರಿಗ್ರಹಗಳು ಭಾವಹಿಂಸೆಯ ಪರ್ಯಾಯನಾಮಗಳಾಗಿರುವುದರಿಂದ ಅವುಗಳಲ್ಲಿ ಹಿಂಸೆಯು ಸಿದ್ಧವಾಗಿರುವುದು. ಬಹಿರಂಗಪರಿಗ್ರಹಗಳಲ್ಲಾದರೋ ಮಮತ್ವರೂಪವಾದ ಮೂರ್ಛಾಪರಿಣಾಮವೇ ನಿಶ್ಚಯವಾಗಿ ಹಿಂಸೆಯ ಭಾವವನ್ನು ಹೊಂದುವುದು. ಮೂರ್ಛಾಪರಿಣಾಮವಿಲ್ಲದಿದ್ದರೆ ಬಾಹ್ಯವಸ್ತುಗಳಲ್ಲಿ ಪರಿಗ್ರಹಭಾವವಿಲ್ಲವೆಂದರ್ಥವು ॥ ೧೧೯ ॥ ಬಾಹ್ಯವಸ್ತುಗಳಲ್ಲಿರುವ ಮೂರ್ಛಾಪರಿಣಾಮವೇ ಪರಿಗ್ರಹವೆನ್ನುವುದಾದರೆ ಬೆಕ್ಕಿನಲ್ಲಿಯೂ ಜಿಂಕೆಯ ಮರಿಯಲ್ಲಿಯೂ ಮೂರ್ಛಾಪರಿಣಾಮದ ತಾರತಮ್ಯವಿರಲಾರದು. ಎಂದರೆ ಹಾಗಾಗುವುದಿಲ್ಲ—ವಿಕಾರಭಾವರೂಪವಾದ ಮೂರ್ಛಾಪರಿಣಾಮದ ವೈಶಿಷ್ಟ್ಯದಿಂದ ಅವುಗಳಲ್ಲಿ ವೈಶಿಷ್ಟ್ಯವಿದೆ. ಅವೆರಡರಲ್ಲಿರುವ ಭಾವಗಳು ಸಮಾನಗಳಲ್ಲವೆಂದರ್ಥವು ॥ ೧೨೦ ॥ ಹಸುರಾದ ಹುಲ್ಲಿನ ಮೊಳಕೆಗಳನ್ನು ತಿನ್ನುವ ಜಿಂಕೆಯ ಮರಿಯಲ್ಲಿ ಮಮತ್ವರೂಪವಾದ ಮೂರ್ಛಾಭಾವವು ಮಂದವಾಗಿರುತ್ತದೆ. ಆ ಭಾವವೇ ಇಲಿಗಳನ್ನು ಕೊಲ್ಲುವ ಬೆಕ್ಕಿನಲ್ಲಿ ತೀವ್ರವಾಗಿರುತ್ತದೆ. ಜಿಂಕೆಯ ಮರಿಯ ಪರಿಣಾಮವು ಸ್ವಭಾವದಿಂದಲೇ ಕೋಮಲ-ಮಂದವಾಗಿಯೂ ಬೆಕ್ಕಿನ ಪರಿಣಾಮವು ಸ್ವಭಾವದಿಂದಲೇ ಕ್ರೂರ-ತೀವ್ರವಾಗಿಯೂ ಇರುತ್ತದೆಂದು ಭಾವವು ॥ ೧೨೧ ॥ ಕೆಚ್ಚಲ ಹಾಲಿನ ಮತ್ತು ಕಲ್ಲುಸಕ್ಕರೆಯ ಸಿಹಿಯಲ್ಲಿ ಪ್ರೀತಿಯ ತಾರತಮ್ಯವಿರುವಂತೆ ಈ ಲೋಕದಲ್ಲಿ ಕಾರಣವಿಶೇಷದಿಂದ ಕಾರ್ಯವಿಶೇಷವು ನಿರ್ಬಾಧವಾಗಿ ಸಿದ್ಧಿಸುವುದು. ಕಾರಣಾನುಸಾರವಾಗಿ

ಮಾಧುರ್ಯಪ್ರೀತಿಃ ಕಿಲ ದುಗ್ಧೇ ಮಂದೈವ ಮಂದಮಾಧುರ್ಯೇ ।
ಸೈವೋತ್ಕಟಮಾಧುರ್ಯೇ ಖಂಡೇ ವ್ಯಪದಿಶ್ಯತೇ ತೀವ್ರಾ ॥ ೧೨೩ ॥
ತತ್ತ್ವಾರ್ಥಾಶ್ರದ್ಧಾನೇ ನಿಯುಕ್ತಂ ಪ್ರಥಮಮೇವ ಮಿಥ್ಯಾತ್ವಂ ।
ಸಮ್ಯಗ್ದರ್ಶನಚೌರಾಃ ಪ್ರಥಮಕಷಾಯಾಶ್ಚ ಚತ್ವಾರಃ ॥ ೧೨೪ ॥
ಪ್ರವಿಹಾಯ ಚ ದ್ವಿತೀಯಾನ್ ದೇಶಚರಿತ್ರಸ್ಯ ಸನ್ಮುಖಾಯಾತಃ ।
ನಿಯತಂ ತೇ ಹಿ ಕಷಾಯಾ ದೇಶಚರಿತ್ರಂ ನಿರುಂಧಂತಿ ॥ ೧೨೫ ॥
ನಿಜಶಕ್ತ್ಯಾ ಶೇಷಾಣಾಂ ಸರ್ವೇಷಾಮಂತರಂಗಸಂಗಾನಾಂ ।
ಕರ್ತವ್ಯಃ ಪರಿಹಾರೋ ಮಾರ್ದವಶೌಚಾದಿಭಾವನಯಾ ॥ ೧೨೬ ॥

ಕಾರ್ಯಸಿದ್ಧಿಯಾಗುವುದೆಂದರ್ಥವು ॥ ೧೨೨ ॥ ಕಡಮೆಯಾದ ಸಿಹಿಯುಳ್ಳ ಹಾಲಿನಲ್ಲಿ ಸಿಹಿಯ ಪ್ರೀತಿಯು ಕಡಮೆಯಾಗಿಯೇ ಇರುತ್ತದೆಂದೂ ಆ ಪ್ರೀತಿಯೇ ಹೆಚ್ಚು ಸಿಹಿಯುಳ್ಳ ಕಲ್ಲುಸಕ್ಕರೆಯಲ್ಲಿ ಹೆಚ್ಚಾಗಿರುತ್ತದೆಂದೂ ಹೇಳಲ್ಪಡುತ್ತದೆ. ಬಾಹ್ಯ ವಸ್ತುವಿನಲ್ಲಿರುವ ಮಾಧುರ್ಯಕ್ಕನುಸಾರವಾಗಿ ಆಂತರಂಗಿಕ ಪ್ರೀತಿಯುಂಟಾಗುವಂತೆ ಬಾಹ್ಯಪರಿಗ್ರಹದ ನ್ಯೂನಾಧಿಕ್ಯಪರಿಮಾಣಕ್ಕನುಸಾರವಾಗಿ ಮೂರ್ಛಾಪರಿಣಾಮವುಂಟಾಗುವುದೆಂದೂ ಬಾಹ್ಯಪರಿಗ್ರಹವು ಕಡಮೆಯಾದಷ್ಟು ಮೂರ್ಛಾಪರಿಣಾಮವೂ ತದ್ರೂಪವಾದ ಹಿಂಸೆಯೂ ಕಡಮೆಯಾಗುವುದೆಂದೂ ಭಾವವು ॥ ೧೨೩ ॥ ಮಿಥ್ಯಾತ್ವವು ಮೊದಲೇ ಜೀವಾದಿತತ್ತ್ವಾರ್ಥಗಳ ಅಶ್ರದ್ಧೆಯಲ್ಲಿ ಕೂಡಿರುತ್ತದೆ. ಮತ್ತು ಮೊದಲನೆಯ ಕಷಾಯಭಾವಗಳು—ಅನಂತಾನುಬಂಧಿಕ್ರೋಧ, ಅನಂತಾನುಬಂಧಿಮಾನ, ಅನಂತಾನುಬಂಧಿಮಾಯಾ, ಅನಂತಾನುಬಂಧಿಲೋಭಗಳು ಸಮ್ಯಗ್ದರ್ಶನವನ್ನು ಕದಿಯುವ ಕಳ್ಳರಾಗಿರುತ್ತಾರೆ. ಅನಾದಿಮಿಥ್ಯಾದೃಷ್ಟಿಯಾಗಿರುವ ಜೀವನಲ್ಲಿ ದರ್ಶನಮೋಹನೀಯಕರ್ಮವಾದ ೧ ಮಿಥ್ಯಾತ್ವ, ಚಾರಿತ್ರಮೋಹನೀಯಕರ್ಮದ ಪ್ರಥಮಭೇದಗಳಾದ ೨ ಅನಂತಾನುಬಂಧಿಕ್ರೋಧ ೩ ಅನಂತಾನುಬಂಧಿಮಾನ ೪ ಅನಂತಾನುಬಂಧಿಮಾಯಾ ೫ ಅನಂತಾನುಬಂಧಿಲೋಭ ಇವೈದು ಮೋಕ್ಷಹೇತುವಾದ ಸಮ್ಯಗ್ದರ್ಶನ-ಶ್ರದ್ಧಾನಕ್ಕೆ ವಿರೋಧಿಗಳಾಗಿರುತ್ತವೆ—ಎಂದರೆ ಸಮ್ಯಗ್ದರ್ಶನಭಾವವುಂಟಾಗದಂತೆ ತಡೆಯುತ್ತವೆಂದು ಭಾವವು ॥ ೧೨೪ ॥ ಚಾರಿತ್ರಮೋಹನೀಯಕರ್ಮದ ದ್ವಿತೀಯ ಭೇದಗಳಾದ ಅಪ್ರತ್ಯಾಖ್ಯಾನ ಕ್ರೋಧ-ಮಾನ-ಮಾಯಾ-ಲೋಭಗಳು ಏಕದೇಶಚಾರಿತ್ರವನ್ನು ತಡೆಯುತ್ತವೆ. ಅವುಗಳನ್ನು ತ್ಯಜಿಸಿದ ಜೀವನು ಏಕದೇಶಚಾರಿತ್ರಕ್ಕೆ ಎಂದರೆ ಅಣುವ್ರತಕ್ಕೆ

ಬಹಿರಂಗಾದಪಿ ಸಂಗಾದ್ಯಸ್ಮಾತ್ಪ್ರಭವತ್ಯಸಂಯಮೋಽನುಚಿತಃ ।
ಪರಿವರ್ಜಯೇದಶೇಷಂ ತಮಚಿತ್ತಂ ವಾ ಸಚಿತ್ತಂ ವಾ ॥ ೧೨೭ ॥
ಯೋಽಪಿ ನ ಶಕ್ಯಸ್ತ್ಯಕ್ತುಂ ಧನಧಾನ್ಯಮನುಷ್ಯವಾಸ್ತುವಿತ್ತಾದಿಃ ।
ಸೋಽಪಿ ತನೂಕರಣೀಯೋ ನಿವೃತ್ತಿರೂಪಂ ಯತಸ್ತತ್ತ್ವಂ ॥ ೧೨೮ ॥
ರಾತ್ರೌ ಭುಂಜಾನಾನಾಂ ಯಸ್ಮಾದನಿವಾರಿತಾ ಭವತಿ ಹಿಂಸಾ ।
ಹಿಂಸಾವಿರತೈಸ್ತಸ್ಮಾತ್ತ್ಯಕ್ತವ್ಯಾ ರಾತ್ರಿಭುಕ್ತಿರಪಿ ॥ ೧೨೯ ॥
ರಾಗಾದ್ಯುದಯಪರತ್ವಾದನಿವೃತ್ತಿರ್ನಾತಿವರ್ತತೇ ಹಿಂಸಾಂ ।
ರಾತ್ರಿಂದಿವಮಾಹರತಃ ಕಥಂ ಹಿ ಹಿಂಸಾ ನ ಸಂಭವತಿ ॥ ೧೩೦ ॥

ಅಭಿಮುಖನಾಗುತ್ತಾನೆ ॥ ೧೨೫ ॥ ತನ್ನ ಶಕ್ತ್ಯನುಸಾರವಾಗಿ ಮೃದುತ್ವ ಶುಚಿತ್ವ-ನಿರ್ಲೋಭತ್ವ ಮೊದಲಾದ ಶುಭಭಾವನೆಯಿಂದ ಉಳಿದ ಎಲ್ಲಾ ಅಂತರಂಗಪರಿಗ್ರಹಗಳನ್ನೂ ತ್ಯಜಿಸಬೇಕು. ಚಾರಿತ್ರಮೋಹನೀಯ ಕರ್ಮದ ೨೫ ಭೇದಗಳಲ್ಲಿ ಮೊದಲನೆಯ ಅನಂತಾನುಬಂಧಿ ಕ್ರೋಧ-ಮಾನ-ಮಾಯಾ-ಲೋಭಗಳು ನಾಲ್ಕು ಸಮ್ಯಗ್ದರ್ಶನಕ್ಕೂ ಅಪ್ರತ್ಯಾಖ್ಯಾನ ಕ್ರೋಧ-ಮಾನ-ಮಾಯಾ-ಲೋಭಗಳು— ನಾಲ್ಕು ಅಣುವ್ರತಕ್ಕೂ ಪ್ರತ್ಯಾಖ್ಯಾನ ಕ್ರೋಧ-ಮಾನ-ಮಾಯಾ-ಲೋಭಗಳು— ನಾಲ್ಕು ಮಹಾವ್ರತಕ್ಕೂ ಸಂಜ್ವಲನ ಕ್ರೋಧ-ಮಾನ-ಮಾಯಾ-ಲೋಭ, ಹಾಸ್ಯ-ರತಿ-ಅರತಿ-ಶೋಕ-ಭಯ-ಜುಗುಪ್ಸಾ, ಸ್ತ್ರೀವೇದ-ಪುಂವೇದ-ನಪುಂಸಕವೇದ ಈ ಹದಿಮೂರು ವಿಕಾರಭಾವಗಳು ಯಥಾಖ್ಯಾತ ಚಾರಿತ್ರಕ್ಕೂ ವಿರೋಧಿಗಳಾಗಿರುತ್ತವೆ. ಶಕ್ತ್ಯನುಸಾರವಾದ ಶುಭಭಾವನೆಗಳಿಂದ ಈ ಎಲ್ಲಾ ಅಂತರಂಗಪರಿಗ್ರಹಗಳನ್ನು ತ್ಯಜಿಸಬೇಕೆಂದು ಭಾವವು ॥ ೧೨೬ ॥ ಧನಧಾನ್ಯಾದಿ ಬಹಿರಂಗಪರಿಗ್ರಹದಿಂದಲೂ ಅನುಚಿತವಾದ ಅಸಂಯಮ (ಅವ್ರತ)ವುಂಟಾಗುವುದರಿಂದ ಆ ಬಹಿರಂಗಪರಿಗ್ರಹವು ಜಡವಾಗಲಿ ಚೇತನವಾಗಲಿ ಅದನ್ನೂ ಸಂಪೂರ್ಣವಾಗಿ ತ್ಯಜಿಸಬೇಕು ॥ ೧೨೭ ॥ ಧನ ಧಾನ್ಯ ಮನುಷ್ಯ ಗೃಹ ಸಂಪತ್ತಿ ಮೊದಲಾದ ಪರಿಗ್ರಹವನ್ನು ತ್ಯಜಿಸುವುದು ಶಕ್ಯವಾಗದಿದ್ದರೆ ಅದನ್ನು ಕೂಡಿದ ಮಟ್ಟಿಗೆ ಕಡಮೆಮಾಡಬೇಕು. ಏಕೆಂದರೆ— ತ್ಯಾಗರೂಪವೇ ವಸ್ತುವಿನ ಸ್ವರೂಪವಾಗಿರುತ್ತದೆ ॥ ೧೨೮ ॥ ರಾತ್ರಿಯಲ್ಲಿ ಭೋಜನ ಮಾಡುವವರಿಗೆ ಅನಿವಾರ್ಯವಾದ ಹಿಂಸಾದೋಷವುಂಟಾಗುವುದರಿಂದ ಹಿಂಸೆಯನ್ನು ತ್ಯಜಿಸುವವರು ರಾತ್ರಿ ಭೋಜನವನ್ನೂ ತ್ಯಜಿಸಬೇಕು ॥ ೧೨೯ ॥ ರಾಗಾದಿಭಾವಗಳ ಪ್ರಾದುರ್ಭಾವದಿಂದ ಮನುಷ್ಯನು ರಾತ್ರಿಭೋಜನವನ್ನು ಬಿಡದಿರುತ್ತಾನೆ. ರಾತ್ರಿ

ಯದ್ಯೇವಂ ತರ್ಹಿ ದಿವಾ ಕರ್ತವ್ಯೋ ಭೋಜನಸ್ಯ ಪರಿಹಾರಃ ।
ಭೋಕ್ತವ್ಯಂ ತು ನಿಶಾಯಾಂ ನೇತ್ಥಂ ನಿತ್ಯಂ ಭವತಿ ಹಿಂಸಾ ॥ ೧೩೧ ॥
ನೈವಂ ವಾಸರಭುಕ್ತೇರ್ಭವತಿ ಹಿ ರಾಗೋಽಧಿಕೋ ರಜನಿಭುಕ್ತೌ ।
ಅನ್ನಕವಲಸ್ಯ ಭುಕ್ತೇರ್ಭುಕ್ತಾವಿವ ಮಾಂಸಕವಲಸ್ಯ ॥ ೧೩೨ ॥
ಅರ್ಕಾಲೋಕೇನ ವಿನಾ ಭುಂಜಾನಃ ಪರಿಹರೇತ್ ಕಥಂ ಹಿಂಸಾಂ ।
ಅಪಿ ಬೋಧಿತಪ್ರದೀಪೇ ಭೋಜ್ಯಜುಷಾಂ ಸೂಕ್ಷ್ಮಜೀವಾನಾಂ ॥ ೧೩೩ ॥
ಕಿಂವಾ ಬಹುಪ್ರಲಪಿತೈರಿತಿ ಸಿದ್ಧಂ ಯೋ ಮನೋವಚನಕಾಯೈಃ ।
ಪರಿಹರತಿ ರಾತ್ರಿಭುಕ್ತಿಂ ಸತತಮಹಿಂಸಾಂ ಸ ಪಾಲಯತಿ ॥ ೧೩೪ ॥

ಭೋಜನವು ಹಿಂಸೆಯನ್ನು ಮೀರಿರುವುದಿಲ್ಲ— ಹಿಂಸೆಯಲ್ಲೇ ಅಡಕವಾಗಿರುತ್ತದೆಂದು ಭಾವವು. ಹಗಲಿರುಳು ಭುಂಜಿಸುವವನಿಗೆ ಹಿಂಸೆಯು ಹೇಗೆ ಸಂಭವಿಸುವುದಿಲ್ಲ? ರಾಗಭಾವದಿಂದ ಹಗಲಿರುಳು ಭುಂಜಿಸುವವನಿಗೆ ಹಿಂಸಾದೋಷವು ತಪ್ಪದೆ ಸಂಭವಿಸುವುದೆಂದು ಭಾವವು ॥ ೧೩೦ ॥ ಹಾಗೆ ಭೋಜನದಲ್ಲಿ ಹಿಂಸೆಯು ಸಂಭವಿಸುವುದಾದರೆ ಹಗಲಿನಲ್ಲಿ ಭೋಜನವನ್ನು ಬಿಟ್ಟು ರಾತ್ರಿಯಲ್ಲಿ ಭೋಜನ ಮಾಡಬೇಕು. ಹಾಗಾದರೆ ಸದಾ ಹಿಂಸೆಯಾಗುವುದಿಲ್ಲ. ಹಗಲಿನ ಭೋಜನದಲ್ಲಾಗುವ ಹಿಂಸೆಯು ತಪ್ಪಿ ರಾತ್ರಿಭೋಜನದಲ್ಲಿ ಮಾತ್ರ ಹಿಂಸೆಯುಂಟಾಗುವುದೆಂದೂ ಸದಾ-ಹಗಲಿರುಳು ಹಿಂಸೆಯಾಗುವುದಿಲ್ಲವೆಂದೂ ಭಾವವು ॥ ೧೩೧ ॥ ಇದಕ್ಕೆ ಸಮಾಧಾನವೇನೆಂದರೆ— ಸರ್ವಸಾಧಾರಣವಾದ ಅನ್ನದ ತುತ್ತಿನ ಭೋಜನದಲ್ಲಿ ಪ್ರೀತಿಯಿರುವುದಕ್ಕಿಂತಲೂ ದುರ್ಲಭವಾದ ಮಾಂಸದ ತುತ್ತಿನ ಭೋಜನದಲ್ಲಿ ಪ್ರೀತಿಯು ಹೆಚ್ಚಾಗಿರುವುದು. ಅದರಂತೆ ಹಗಲಿನ ಭೋಜನದಲ್ಲಿ ಪ್ರೀತಿಯಿರುವುದಕ್ಕಿಂತಲೂ ರಾತ್ರಿಯ ಭೋಜನದಲ್ಲಿ ಹೆಚ್ಚು ಪ್ರೀತಿಯುಂಟಾಗುವುದು. ಪ್ರೀತಿ-ರಾಗಭಾವದ ನ್ಯೂನಾಧಿಕ್ಯವೇ ಹಿಂಸಾದೋಷದ ನ್ಯೂನಾಧಿಕ್ಯಕ್ಕೆ ಕಾರಣವೆಂದು ಭಾವವು ॥ ೧೩೨ ॥ ಸೂರ್ಯಪ್ರಕಾಶವಿಲ್ಲದೆ— ರಾತ್ರಿಯಲ್ಲಿ ದೀಪದ ಪ್ರಕಾಶದಲ್ಲಿ ಭೋಜನ ಮಾಡುವವನೂ ಆಹಾರಪದಾರ್ಥದಲ್ಲಿ ಬೆರೆಯುವ ಸೂಕ್ಷ್ಮಜೀವಿಗಳ ಹಿಂಸೆಯನ್ನು ಹೇಗೆ ಪರಿಹರಿಸಬಲ್ಲನು? ದೃಷ್ಟಿಗೆ ಗೋಚರವಾಗದ ಬಹುಸೂಕ್ಷ್ಮಜೀವಿಗಳ ಓಡಾಟವು ರಾತ್ರಿಯಲ್ಲಿ ದೀಪದ ಪ್ರಕಾಶದಲ್ಲಿ ಹೆಚ್ಚೆಂದೂ ಅವುಗಳ ಹಿಂಸೆಯಾಗುವುದೆಂದೂ ಭಾವವು ॥ ೧೩೩ ॥ ಅಥವಾ ಹೆಚ್ಚು ಮಾತುಗಳಿಂದೇನು? ಮನೋವಾಕ್ಕಾಯಗಳಿಂದ ರಾತ್ರಿ ಭೋಜನವನ್ನು ತ್ಯಜಿಸುವವನು ಯಾವಾಗಲೂ ಅಹಿಂಸಾಧರ್ಮವನ್ನು

ಇತ್ಯತ್ರ ಶ್ರಿತಯಾತ್ಮನಿ ಮಾರ್ಗೇ ಮೋಕ್ಷಸ್ಯ ಯೇ ಸ್ವಹಿತಕಾಮಾಃ ।
ಅನುಪರತಂ ಪ್ರಯತಂತೇ ಪ್ರಯಾಂತಿ ತೇ ಮುಕ್ತಿಮಚಿರೇಣ ॥ ೧೩೫ ॥
ಪರಿಧಯ ಇವ ನಗರಾಣಿ ವ್ರತಾನಿ ಕಿಲ ಪಾಲಯಂತಿ ಶೀಲಾನಿ ।
ವ್ರತಪಾಲನಾಯ ತಸ್ಮಾಚ್ಛೀಲಾನ್ಯಪಿ ಪಾಲನೀಯಾನಿ ॥ ೧೩೬ ॥
ಪ್ರವಿಧಾಯ ಸುಪ್ರಸಿದ್ಧೈರ್ಮರ್ಯಾದಾಂ ಸರ್ವತೋಽಪ್ಯಭಿಜ್ಞಾನೈಃ ।
ಪ್ರಾಚ್ಯಾದಿಭ್ಯೋ ದಿಗ್ಭ್ಯಃ ಕರ್ತವ್ಯಾ ವಿರತಿರವಿಚಲಿತಾ ॥ ೧೩೭ ॥
ಇತಿ ನಿಯಮಿತದಿಗ್ಭಾಗೇ ಪ್ರವರ್ತತೇ ಯಸ್ತತೋ ಬಹಿಸ್ತಸ್ಯ ।
ಸಕಲಾಸಂಯಮವಿರಹಾದ್ಭವತ್ಯಹಿಂಸಾವ್ರತಂ ಪೂರ್ಣಂ ॥ ೧೩೮ ॥

ಪಾಲಿಸುತ್ತಾನೆಂಬುದು ಸಿದ್ಧವಾಗುವುದು. ರಾತ್ರಿಭೋಜನತ್ಯಾಗವು ಧಾರ್ಮಿಕ ದೃಷ್ಟಿಯಿಂದಲೇ ಅಲ್ಲದೆ, ಭೋಜನಕ್ಕೂ ಶಯನಕ್ಕೂ ಮಧ್ಯದಲ್ಲಿ ಮೂರು ಘಂಟೆಗಳ ಕಾಲವಾದರೂ ವಿರಾಮವಿರಬೇಕೆಂದು ಆರೋಗ್ಯಶಾಸ್ತ್ರದಲ್ಲಿ ಹೇಳಿರುವುದರಿಂದ, ಆರೋಗ್ಯದೃಷ್ಟಿಯಿಂದಲೂ ಗ್ರಾಹ್ಯವಾಗಿರುತ್ತದೆಂದು ತಿಳಿಯಬೇಕು ॥ ೧೩೪ ॥ ಹೀಗೆ ಈ ಲೋಕದಲ್ಲಿ ತಮಗೆ ಹಿತವನ್ನು ಬಯಸುವ ಯಾವ ಮನುಷ್ಯರು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವಾದ ಮೋಕ್ಷಮಾರ್ಗದಲ್ಲಿ ಯಾವಾಗಲೂ ಪ್ರಯತ್ನಿಸುತ್ತಾರೋ ಅವರು ಶೀಘ್ರವಾಗಿ ಮುಕ್ತಿಯನ್ನು ಪಡೆಯುತ್ತಾರೆ ॥ ೧೩೫ ॥ ಕೋಟೆಗಳು ನಗರವನ್ನು ರಕ್ಷಿಸುವಂತೆ, ಮೂರು ಗುಣವ್ರತಗಳೂ ನಾಲ್ಕು ಶಿಕ್ಷಾವ್ರತಗಳೂ ಸೇರಿ ಸಪ್ತಶೀಲಗಳು ಅಹಿಂಸಾದಿ ಪಂಚಾಣುವ್ರತಗಳನ್ನು ರಕ್ಷಿಸುತ್ತವೆ. ಆದುದರಿಂದ ವ್ರತಗಳ ರಕ್ಷಣೆಗೋಸ್ಕರ ಶೀಲಗಳನ್ನೂ ರಕ್ಷಿಸಬೇಕು. ಕೋಟೆಗಳು ನಗರಗಳಿಗೆ ರಕ್ಷಕಗಳಾಗಿರುವಂತೆ ಶೀಲಗಳು ವ್ರತಗಳಿಗೆ ರಕ್ಷಕಗಳಾಗಿರುವುದರಿಂದ ಶೀಲಗಳನ್ನೂ ಪಾಲಿಸಬೇಕೆಂದು ಭಾವವು ॥ ೧೩೬ ॥ ಸುಪ್ರಸಿದ್ಧಗಳಾದ ನದೀ ಪರ್ವತ ಮೊದಲಾದ ಗುರುತುಗಳಿಂದ ಎಲ್ಲಾ ಕಡೆಗಳಲ್ಲಿಯೂ ಎಲ್ಲೆಯನ್ನು ಮಾಡಿ ಪೂರ್ವಾದಿದಿಕ್ಕುಗಳ ದೆಸೆಯಿಂದ ನಿಶ್ಚಲವಾದ ವ್ರತವನ್ನು ಮಾಡಬೇಕು. ಪೂರ್ವಾದಿದಶದಿಕ್ಕುಗಳಲ್ಲಿ ಗುರುತುಗಳನ್ನು ಮಾಡಿಕೊಂಡು ಅವುಗಳ ಹೊರಗೆ ಹೋಗುವುದಿಲ್ಲವೆಂದು ಸಂಕಲ್ಪವನ್ನು ಮಾಡಿಕೊಳ್ಳಬೇಕೆಂದು ಭಾವವು ॥ ೧೩೭ ॥ ಈ ರೀತಿಯಾಗಿ ಯಾವನು ತಾನು ಸಂಕಲ್ಪಿಸಿದ ದಿಗ್ಭಾಗದಲ್ಲಿ ನಡೆಯುತ್ತಾನೋ ಅವನಿಗೆ ಆ ಎಲ್ಲೆಯ ಹೊರಗೆ ಸಮಸ್ತವಾದ ಅಸಂಯಮದ (ಅವ್ರತದ) ತ್ಯಾಗವಾಗುವುದರಿಂದ ಪೂರ್ಣವಾದ ಅಹಿಂಸಾವ್ರತವು ಸಿದ್ಧಿಸುವುದು. ದಿಗ್ವ್ರತಧಾರಿಯು ಎಲ್ಲೆಯ ಹೊರಗೆ

ತತ್ರಾಪಿ ಚ ಪರಿಮಾಣಂ ಗ್ರಾಮಾಪಣಭವನಪಾಟಕಾದೀನಾಂ ।
ಪ್ರವಿಧಾಯ ನಿಯತಕಾಲಂ ಕರಣೀಯಂ ವಿರಮಣಂ ದೇಶಾತ್ ॥ ೧೩೯ ॥
ಇತಿ ವಿರತೋ ಬಹುದೇಶಾತ್ ತದುತ್ಥಹಿಂಸಾವಿಶೇಷಪರಿಹಾರಾತ್ ।
ತತ್ಕಾಲಂ ವಿಮಲಮತಿಃ ಶ್ರಯತ್ಯಹಿಂಸಾಂ ವಿಶೇಷೇಣ ॥ ೧೪೦ ॥
ಪಾಪರ್ದ್ಧಿಜಯಪರಾಜಯಸಂಗರಪರದಾರಗಮನಚೌರ್ಯಾದ್ಯಾಃ ।
ನ ಕದಾಚನಾಪಿ ಚಿಂತ್ಯಾಃ ಪಾಪಫಲಂ ಕೇವಲಂ ಯಸ್ಮಾತ್ ॥ ೧೪೧ ॥
ವಿದ್ಯಾವಾಣಿಜ್ಯಮಷೀಕೃಷಿಸೇವಾಶಿಲ್ಪಜೀವಿನಾಂ ಪುಂಸಾಂ ।
ಪಾಪೋಪದೇಶದಾನಂ ಕದಾಚಿದಪಿ ನೈವ ವಕ್ತವ್ಯಂ ॥ ೧೪೨ ॥
ಭೂಖನನವೃಕ್ಷಮೊಟ್ಟನಶಾಡ್ವಲದಲನಾಂಬುಸೇಚನಾದೀನಿ ।
ನಿಷ್ಕಾರಣಂ ನ ಕುರ್ಯಾದ್ದಲಫಲಕುಸುಮೋಚ್ಚಯಾನಪಿ ಚ ॥ ೧೪೩ ॥

ತ್ರಸಪ್ರಾಣಿಹಿಂಸಕನೂ ಸ್ಥಾವರಪ್ರಾಣಿಹಿಂಸಕನೂ ಅಲ್ಲದಿರುವುದರಿಂದ ಆ ಕ್ಷೇತ್ರದ ಅಪೇಕ್ಷೆಯಿಂದ ಮಹಾವ್ರತಿಯೆನ್ನಿಸುವನೆಂದು ಭಾವವು ॥ ೧೩೮ ॥ ಆ ದಿಗ್ವ್ರತದಲ್ಲಿಯೂ ಊರು ಅಂಗಡಿ ಮನೆ ಮೊಹಲ್ಲ ಮೊದಲಾದುವನ್ನು ಗುರುತು ಮಾಡಿ ಗೊತ್ತುಮಾಡಿದ ಕಾಲದ ವರೆಗೆ ಆ ಅವಧಿಯ ಹೊರಗೆ ವ್ಯವಹಾರವನ್ನು ಪರಿತ್ಯಜಿಸಬೇಕು. ತಾತ್ಪರ್ಯ—ಯಾವಜ್ಜೀವ ಮಾಡಿಕೊಳ್ಳುವ ವ್ರತಕ್ಕೆ ದಿಗ್ವ್ರತವೆಂದೂ ಆ ಎಲ್ಲೆಯೊಳಗೂ ವರ್ಷ ಮಾಸ ಪಕ್ಷಾದಿ ಕಾಲಪರಿಮಿತಿಯಿಂದ ಮಾಡಿಕೊಳ್ಳುವ ವ್ರತಕ್ಕೆ ದೇಶವ್ರತವೆಂದೂ ಹೆಸರು ॥ ೧೩೯ ॥ ಈ ರೀತಿಯಾಗಿ ಅಧಿಕ ಪ್ರದೇಶದಿಂದ ನಿವೃತ್ತನೂ ನಿರ್ಮಲಬುದ್ಧಿಯುಳ್ಳವನೂ ಆದ ವ್ರತಿಯು ಆ ಪರಿಮಿತಕಾಲದಲ್ಲಿ ಹೆಚ್ಚಾಗಿ ಹಿಂಸಾತ್ಯಾಗವನ್ನು ಮಾಡುವುದರಿಂದ ಅವನು ಅಹಿಂಸಾಮಹಾವ್ರತವನ್ನು ಪಡೆಯುತ್ತಾನೆ. ಅವಧಿಯ ಹೊರಗೆ ಅಹಿಂಸಾವ್ರತವನ್ನು ಪಾಲಿಸಿದಂತಾಗುವುದೆಂದು ಭಾವವು ॥ ೧೪೦ ॥ ಬೇಟೆ, ಜಯ, ಅಪಜಯ, ಯುದ್ಧ, ಪರಸ್ತ್ರೀಗಮನ, ಚೌರ್ಯ ಮೊದಲಾದ ದುರ್ವಿಷಯಗಳನ್ನು ಮನಸ್ಸಿನಲ್ಲಿ ಯೋಚಿಸಿದರೆ ಪಾಪರೂಪವಾದ ಫಲವೇ ಉಂಟಾಗುವುದರಿಂದ ಅವುಗಳನ್ನೆಂದೂ ಚಿಂತಿಸಬಾರದು ॥ ೧೪೧ ॥ ವಿದ್ಯೆ, ವ್ಯಾಪಾರ, ಬರೆವಣಿಗೆ, ಕೃಷಿ, ಸೇವೆ, ಶಿಲ್ಪ ಮೊದಲಾದುವುಗಳಿಂದ ಜೀವಿಸುವ ಮನುಷ್ಯರಿಗೆ ಪಾಪೋಪದೇಶವನ್ನು ಮಾಡುವ ಮಾತನ್ನೆಂದೂ ಹೇಳಬಾರದು. ಇಂತಹ ವಚನಕ್ಕೆ ಪಾಪೋಪದೇಶವೆಂಬ ಅನರ್ಥದಂಡವೆಂದು ಹೆಸರು ॥ ೧೪೨ ॥ ನಿಷ್ಕಾರಣವಾಗಿ ನೆಲವನ್ನು ಅಗೆಯುವುದು, ಮರವನ್ನು ಕಡಿಯುವುದು, ಹುಲ್ಲನ್ನು ಕತ್ತರಿಸುವುದು, ನೀರನ್ನು ಎರಚು

ಅಸಿಧೇನುವಿಷಹುತಾಶನಲಾಂಗಲಕರವಾಲಕಾರ್ಮುಕಾದೀನಾಂ ।
ವಿತರಣಮುಪಕರಣಾನಾಂ ಹಿಂಸಾಯಾಃ ಪರಿಹರೇದ್ಯತ್ನಾತ್ ॥ ೧೪೪ ॥
ರಾಗಾದಿವರ್ಧನಾನಾಂ ದುಷ್ಟಕಥಾನಾಮಬೋಧಬಹುಲಾನಾಂ ।
ನ ಕದಾಚನ ಕುರ್ವೀತ ಶ್ರವಣಾರ್ಜನಶಿಕ್ಷಣಾದೀನಿ ॥ ೧೪೫ ॥
ಸರ್ವಾನರ್ಥಪ್ರಥಮಂ ಮಥನಂ ಶೌಚಸ್ಯ ಸದ್ಮ ಮಾಯಾಯಾಃ ।
ದೂರಾತ್ಪರಿಹರಣೀಯಂ ಚೌರ್ಯಾಸತ್ಯಾಸ್ಪದಂ ದ್ಯೂತಂ ॥ ೧೪೬ ॥
ಏವಂವಿಧಮಪರಮಪಿ ಜ್ಞಾತ್ವಾ ಮುಂಚತ್ಯನರ್ಥದಂಡಂ ಯಃ ।
ತಸ್ಯಾನಿಶಮನವದ್ಯಂ ವಿಜಯಮಹಿಂಸಾವ್ರತಂ ಲಭತೇ ॥ ೧೪೭ ॥
ರಾಗದ್ವೇಷತ್ಯಾಗಾನ್ನಿಖಿಲದ್ರವ್ಯೇಷು ಸಾಮ್ಯಮವಲಂಬ್ಯ ।
ತತ್ತ್ವೋಪಲಬ್ಧಿಮೂಲಂ ಬಹುಶಃ ಸಾಮಾಯಿಕಂ ಕಾರ್ಯಂ ॥ ೧೪೮ ॥

ವುದು ಮೊದಲಾದುವುಗಳನ್ನೂ ಎಲೆ, ಫಲ, ಹೂವನ್ನು ರಾಶಿಮಾಡು ವುದು ಮೊದಲಾದುವುಗಳನ್ನೂ ಮಾಡಬಾರದು ॥ ೧೪೩ ॥ ಚೂರಿ ನಂಜು ಬೆಂಕಿ ನೇಗಿಲು ಕತ್ತಿ ಬಿಲ್ಲು ಮೊದಲಾದ ಹಿಂಸೋಪಕರಣಗಳ ದಾನ ವನ್ನು ಯತ್ನದಿಂದ ಪರಿತ್ಯಜಿಸಬೇಕು ॥ ೧೪೪ ॥ ರಾಗದ್ವೇಷ ಮೊದಲಾದ ದುರ್ಭಾವನೆಗಳನ್ನು ಹೆಚ್ಚಿಸುವುವೂ ಹೆಚ್ಚು ಅಜ್ಞಾನವನ್ನುಂಟುಮಾಡು ವುವೂ ಆದ ದುಷ್ಟಕಥೆಗಳನ್ನು ಕೇಳುವುದು ಸಂಪಾದಿಸುವುದು ಮತ್ತು ಕಲಿಯುವುದು ಮೊದಲಾದುವುಗಳನ್ನು ಎಂದೂ ಮಾಡಬಾರದು. ರಾಗಾದಿ ವಿಕಾರಭಾವಗಳನ್ನುಂಟುಮಾಡುವ ದುಷ್ಕಥೆಗಳನ್ನು ಕೇಳಲೂ ಬಾರದು, ಸಂಪಾದಿಸಲೂ ಬಾರದು, ಕಲಿಯಲೂ ಬಾರದೆಂದು ಭಾವವು ॥ ೧೪೫ ॥ ಸಮಸ್ತವಾದ ಅನರ್ಥಗಳಲ್ಲಿ ಮೊದಲನೆಯದೂ ಚಿತ್ತಶುದ್ಧಿಯನ್ನು ನಾಶಮಾಡುವುದೂ ವಂಚನೆಗೆ ಮನೆಯೂ ಚೌರ್ಯಕ್ಕೂ ಅಸತ್ಯಕ್ಕೂ ಆಶ್ರಯಸ್ಥಾನವೂ ಆದ ಜೂಜನ್ನು ಬಹುದೂರವಿರಿಸಬೇಕು. ಜುಗಾರಿ ಯನ್ನು ಪರಿತ್ಯಜಿಸಬೇಕೆಂದು ಭಾವವು ॥ ೧೪೬ ॥ ಈ ಪ್ರಕಾರವಾದ ಬೇರೆ ಅನರ್ಥದಂಡವನ್ನೂ ಯಾವನು ತಿಳಿದು ತ್ಯಜಿಸುತ್ತಾನೋ ಯಾವಾ ಗಲೂ ಅವನ ನಿರ್ದುಷ್ಟವಾದ ಅಹಿಂಸಾವ್ರತವು ಜಯವನ್ನು ಹೊಂದುತ್ತದೆ. ಅನರ್ಥದಂಡವನ್ನು ಸಂಪೂರ್ಣವಾಗಿ ತ್ಯಜಿಸುವವನಿಗೆ ಅಹಿಂಸಾವ್ರತವು ಚೆನ್ನಾಗಿ ಸಿದ್ಧಿಸುವುದೆಂದು ಭಾವವು ॥ ೧೪೭ ॥ ಇಷ್ಟಾನಿಷ್ಟಪದಾರ್ಥಗಳ ಲ್ಲೆಲ್ಲ ರಾಗದ್ವೇಷಗಳನ್ನು ತ್ಯಜಿಸಿ ಸಮಾನಭಾವವನ್ನು ಹೊಂದಿ ಬಾರಿ ಬಾರಿಗೂ ಆತ್ಮತತ್ತ್ವಸ್ವರೂಪದ ಪ್ರಾಪ್ತಿಗೆ ಮೂಲ-ಕಾರಣವಾದ ಸಾಮಾ ಯಿಕವನ್ನು ಮಾಡಬೇಕು. ಸಂಸಾರದ ಮತ್ತು ಮೋಕ್ಷದ ಸ್ವರೂಪ

ರಜನೀದಿನಯೋರಂತೇ ತದವಶ್ಯಂ ಭಾವನೀಯಮವಿಚಲಿತಂ ।
ಇತರತ್ರ ಪುನಃ ಸಮಯೇ ನ ಕೃತಂ ದೋಷಾಯ ತದ್ಗುಣಾಯ ಕೃತಂ ॥ ೧೪೯ ॥
ಸಾಮಾಯಿಕಶ್ರಿತಾನಾಂ ಸಮಸ್ತಸಾವದ್ಯಯೋಗಪರಿಹಾರಾತ್ ।
ಭವತಿ ಮಹಾವ್ರತಮೇಷಾಮುದಯೇಽಪಿ ಚರಿತ್ರಮೋಹಸ್ಯ ॥ ೧೫೦ ॥
ಸಾಮಾಯಿಕಸಂಸ್ಕಾರಂ ಪ್ರತಿದಿನಮಾರೋಪಿತಂ ಸ್ಥಿರೀಕರ್ತುಂ ।
ಪಕ್ಷಾರ್ಧಯೋರ್ದ್ವಯೋರಪಿ ಕರ್ತವ್ಯೋಽವಶ್ಯಮುಪವಾಸಃ ॥ ೧೫೧ ॥
ಮುಕ್ತಸಮಸ್ತಾರಂಭಃ ಪ್ರೋಷಧದಿನಪೂರ್ವವಾಸರಸ್ಯಾರ್ಧೇ ।
ಉಪವಾಸಂ ಗೃಹ್ಣೀಯಾನ್ಮಮತ್ವಮಪಹಾಯ ದೇಹಾದೌ ॥ ೧೫೨ ॥
ಶ್ರಿತ್ವಾ ವಿವಿಕ್ತವಸತಿಂ ಸಮಸ್ತಸಾವದ್ಯಯೋಗಮಪನೀಯ ।
ಸರ್ವೇಂದ್ರಿಯಾರ್ಥವಿರತಃ ಕಾಯಮನೋವಚನಗುಪ್ತಿಭಿಸ್ತಿಷ್ಠೇತ್ ॥ ೧೫೩ ॥

ವನ್ನು ಭಾವಿಸುವುದಕ್ಕೆ ಸಾಮಾಯಿಕವೆಂದು ಹೆಸರು ॥ ೧೪೮ ॥ ಆ ಸಾಮಾಯಿಕವನ್ನು ಪ್ರತಿದಿನ ಪ್ರಾತಃಕಾಲ ಸಾಯಂಕಾಲಗಳಲ್ಲಿ ಏಕಾಗ್ರತೆಯಿಂದ ಅವಶ್ಯವಾಗಿ ಭಾವಿಸಬೇಕು. ಮತ್ತೆ ಬೇರೆ ಸಮಯ ದಲ್ಲಿ ಆ ಸಾಮಾಯಿಕವನ್ನು ಮಾಡಿದರೆ ಗುಣವಲ್ಲದೆ ದೋಷವಿಲ್ಲ. ಗೃಹಸ್ಥನು ಪ್ರಾತಃಕಾಲ ಸಾಯಂಕಾಲಗಳಲ್ಲಿ ಸಾಮಾಯಿಕವನ್ನು ಮಾಡಲೇಬೇಕೆಂದೂ ಇತರ ಸಮಯದಲ್ಲಿ ಮಾಡಿದರೆ ಗುಣವಲ್ಲದೆ ದೋಷವಿಲ್ಲವೆಂದೂ ಭಾವವು ॥ ೧೪೯ ॥ ಸಾಮಾಯಿಕದಲ್ಲಿರುವ ಈ ಗೃಹಸ್ಥರಿಗೆ ಸಕಲದೋಷಗಳ ಸಂಬಂಧದ ಪರಿಹಾರವಾಗುವುದರಿಂದ ಚಾರಿತ್ರಮೋಹನೀಯಕರ್ಮದ ಉದಯದಲ್ಲಿಯೂ ಅಹಿಂಸಾದಿಮಹಾ ವ್ರತವುಂಟಾಗುವುದು. ಚಾರಿತ್ರಮೋಹನೀಯಕರ್ಮದ ಉದಯವಿದ್ದರೆ ದೋಷಗಳುಂಟಾಗುತ್ತವಾದರೂ ಸಾಮಾಯಿಕದಲ್ಲಿರುವವರಿಗೆ ಆ ದೋಷ ಗಳುಂಟಾಗದೆ ಅಹಿಂಸಾದಿಮಹಾವ್ರತಗಳು ಸಿದ್ಧಿಸುವುವೆಂದು ಭಾವವು ॥ ೧೫೦ ॥ ಪ್ರತಿದಿವಸ ಮಾಡಲ್ಪಟ್ಟ ಸಾಮಾಯಿಕಸಂಸ್ಕಾರವನ್ನು ದೃಢ ಪಡಿಸುವುದಕ್ಕೋಸ್ಕರ ಎರಡು ಪಕ್ಷಾರ್ಧ (ಅಷ್ಟಮೀಚತುರ್ದಶಿ)ಗಳಲ್ಲಿ ಉಪವಾಸವನ್ನು ಅವಶ್ಯವಾಗಿ ಮಾಡಬೇಕು ॥ ೧೫೧ ॥ ಆರಂಭಗಳನ್ನೆಲ್ಲ ತ್ಯಜಿಸಿ ಶರೀರ ಮೊದಲಾದುದರಲ್ಲಿ ಮಮಕಾರವನ್ನು ಬಿಟ್ಟು ಪ್ರೋಷ ಧೋಪವಾಸವನ್ನು ಮಾಡುವ ಮೊದಲನೆಯ ದಿವಸದ ಅರ್ಧಭಾಗ ದಲ್ಲಿ ಎಂದರೆ ಸಪ್ತಮೀ ತ್ರಯೋದಶೀ ದಿವಸ ಮಧ್ಯಾಹ್ನದಲ್ಲಿ ಉಪ ವಾಸನಿಯಮವನ್ನು ಅಂಗೀಕರಿಸಬೇಕು ॥ ೧೫೨ ॥ ಆ ಮೇಲೆ ನಿರ್ಜನ ವಾದ ವಸತಿಯನ್ನು ಹೊಂದಿ ದೋಷಯುಕ್ತವಾದ ಕಾರ್ಯಸಂಬಂಧ

ಧರ್ಮಧ್ಯಾನಾಸಕ್ತೋ ವಾಸರಮತಿವಾಹ್ಯ ವಿಹಿತಸಾಂಧ್ಯವಿಧಿಂ ।
ಶುಚಿಸಂಸ್ತರೇ ತ್ರಿಯಾಮಾಂ ಗಮಯೇತ್ ಸ್ವಾಧ್ಯಾಯಜಿತನಿದ್ರಃ ॥ ೧೫೪ ॥
ಪ್ರಾತಃ ಪ್ರೋತ್ಥಾಯ ತತಃ ಕೃತ್ವಾ ತಾತ್ಕಾಲಿಕಂ ಕ್ರಿಯಾಕಲ್ಪಂ ।
ನಿರ್ವರ್ತಯೇದ್ಯಥೋಕ್ತಂ ಜಿನಪೂಜಾಂ ಪ್ರಾಸುಕೈರ್ದ್ರವ್ಯೈಃ ॥ ೧೫೫ ॥
ಉಕ್ತೇನ ತತೋ ವಿಧಿನಾ ನೀತ್ವಾ ದಿವಸಂ ದ್ವಿತೀಯರಾತ್ರಿಂ ಚ ।
ಅತಿವಾಹಯೇತ್ಪ್ರಯತ್ನಾದರ್ಧಂ ಚ ತೃತೀಯದಿವಸಸ್ಯ ॥ ೧೫೬ ॥
ಇತಿ ಯಃ ಷೋಡಶಯಾಮಾನ್ ಗಮಯತಿ ಪರಿಮುಕ್ತಸಕಲಸಾವದ್ಯಃ ।
ತಸ್ಯ ತದಾನೀಂ ನಿಯತಂ ಪೂರ್ಣಮಹಿಂಸಾವ್ರತಂ ಭವತಿ ॥ ೧೫೭ ॥
ಭೋಗೋಪಭೋಗಹೇತೋಃ ಸ್ಥಾವರಹಿಂಸಾ ಭವೇತ್ಕಿಲಾಮೀಷಾಂ ।
ಭೋಗೋಪಭೋಗವಿರಹಾದ್ಭವತಿ ನ ಲೇಶೋಽಪಿ ಹಿಂಸಾಯಾಃ ॥ ೧೫೮ ॥

ವನ್ನೆಲ್ಲ ತ್ಯಜಿಸಿ ಎಲ್ಲಾ ಇಂದ್ರಿಯವಿಷಯಗಳಿಂದ ನಿವೃತ್ತನಾಗಿ ಕಾಯಗುಪ್ತಿ ಮನೋಗುಪ್ತಿ ವಚನಗುಪ್ತಿರೂಪವಾದ ತ್ರಿಗುಪ್ತಿಯನ್ನು ಹೊಂದಿರಬೇಕು ॥ ೧೫೩ ॥ ಪ್ರಾತಃಸಂಧ್ಯಾ ಸಾಯಂಸಂಧ್ಯಾವಿಧಿಗಳನ್ನು ಮಾಡಿ ಧರ್ಮಧ್ಯಾನದಲ್ಲಿ ಆಸಕ್ತನಾಗಿ ಆ ದಿನವನ್ನು (ಹಗಲನ್ನು) ಕಳೆದು ಶಾಸ್ತ್ರಪಠನದಿಂದ ನಿದ್ರೆಯನ್ನು ಜಯಿಸಿದವನಾಗಿ ಶುಚಿಯಾದ ಹಾಸುಗೆಯಲ್ಲಿ ರಾತ್ರಿಯನ್ನು ಕಳೆಯಬೇಕು ॥ ೧೫೪ ॥ ಆ ಮೇಲೆ ಪ್ರಾತಃಕಾಲದಲ್ಲಿ ಎದ್ದು ಆ ಕಾಲದ ಕಾರ್ಯವನ್ನೆಲ್ಲ ಮಾಡಿ ಜೀವಸಂಬಂಧರಹಿತವಾದ ಪ್ರಾಸುಕ ಪದಾರ್ಥಗಳಿಂದ ಶಾಸ್ತ್ರೋಕ್ತವಾಗಿ ಜಿನಪೂಜೆಯನ್ನು ಮಾಡಬೇಕು ॥ ೧೫೫ ॥ ಆ ಮೇಲೆ ಪೂರ್ವೋಕ್ತವಿಧಿಯಿಂದ ಉಪವಾಸದ ದಿವಸವನ್ನೂ ಎರಡನೆಯ ರಾತ್ರಿಯನ್ನೂ ಕಳೆದು ಮೂರನೆಯ–ನವಮಿ ಮತ್ತು ಪೂರ್ಣಿಮೆಯ ಅಥವಾ ಅಮಾವಾಸ್ಯೆಯ ದಿವಸದ ಅರ್ಧಭಾಗವನ್ನೂ ಪ್ರಯತ್ನದಿಂದ ಕಳೆಯಬೇಕು. ಎರಡು ರಾತ್ರಿ ಎರಡು ($\frac{೧}{೨}+\frac{೧}{೨}+೧=೨$) ಹಗಲು ಉಪವಾಸವಿರುವುದಕ್ಕೆ ಪ್ರೋಷಧೋಪವಾಸವೆಂದು ಹೆಸರು ॥ ೧೫೬ ॥ ಈ ಪ್ರಕಾರವಾಗಿ ಸಮಸ್ತಪಾಪಕಾರ್ಯಗಳನ್ನು ಪರಿತ್ಯಜಿಸಿದವನಾಗಿ ಯಾವನು ಹದಿನಾರು ಜಾವ (೧೨೦ ಗಳಿಗೆ)ಗಳನ್ನು ಕಳೆಯುತ್ತಾನೋ ಅವನಿಗೆ ಅಷ್ಟು ಕಾಲದ ವರೆಗೆ ಸಂಪೂರ್ಣವಾದ ಅಹಿಂಸಾವ್ರತವು ನಿಜವಾಗಿ ಸಿದ್ಧಿಸುವುದು ॥ ೧೫೭ ॥ ನಿಶ್ಚಯವಾಗಿ ಈ ದೇಶವ್ರತಿಶ್ರಾವಕರಿಗೆ ಭೋಗೋಪಭೋಗಪದಾರ್ಥಗಳ ನಿಮಿತ್ತದಿಂದ ಸ್ಥಾವರಹಿಂಸೆಯಾಗುವುದು. ಆ ಭೋಗೋಪಭೋಗಪದಾರ್ಥಗಳ ತ್ಯಾಗದಿಂದ ಹಿಂಸೆಯ ಲೇಶವೂ ಉಂಟಾಗುವುದಿಲ್ಲ. ವಾಗ್ಗುಪ್ತಿಯಿಂದ ಅಸತ್ಯದ

ವಾಗ್ಗುಪ್ತೇರ್ನಾಸ್ತ್ಯನೃತಂ ನ ಸಮಸ್ತಾದಾನವಿರಹತಃ ಸ್ತೇಯಂ ।
ನಾಬ್ರಹ್ಮ ಮೈಥುನಮುಚಃ ಸಂಗೋ ನಾಂಗೇಽಪ್ಯಮೂರ್ಛಸ್ಯ ॥ ೧೫೯ ॥
ಇತ್ಥಮಶೇಷಿತಹಿಂಸಃ ಪ್ರಯಾತಿ ಸ ಮಹಾವ್ರತಿತ್ವಮುಪಚಾರಾತ್ ।
ಉದಯತಿ ಚರಿತ್ರಮೋಹೇ ಲಭತೇ ತು ನ ಸಂಯಮಸ್ಥಾನಂ ॥ ೧೬೦ ॥
ಭೋಗೋಪಭೋಗಮೂಲಾ ವಿರತಾವಿರತಸ್ಯ ನಾನ್ಯತೋ ಹಿಂಸಾ ।
ಅಧಿಗಮ್ಯ ವಸ್ತುತತ್ತ್ವಂ ಸ್ವಶಕ್ತಿಮಪಿ ತಾವಪಿ ತ್ಯಾಜ್ಯೌ ॥ ೧೬೧ ॥
ಏಕಮಪಿ ಪ್ರಜಿಘಾಂಸುರ್ನಿಹಂತ್ಯನಂತಾನ್ಯತಸ್ತತೋಽವಶ್ಯಂ ।
ಕರಣೀಯಮಶೇಷಾಣಾಂ ಪರಿಹರಣಮನಂತಕಾಯಾನಾಂ ॥ ೧೬೨ ॥
ನವನೀತಂ ಚ ತ್ಯಾಜ್ಯಂ ಯೋನಿಸ್ಥಾನಂ ಪ್ರಭೂತಜೀವಾನಾಂ ।
ಯದ್ವಾಪಿ ಪಿಂಡಶುದ್ಧೌ ವಿರುದ್ಧಮಭಿಧೀಯತೇ ಕಿಂಚಿತ್ ॥ ೧೬೩ ॥

ತ್ಯಾಗವಾಗುವುದು. ಸಕಲ ಪದಾರ್ಥಗಳ ಗ್ರಹಣವನ್ನು ತ್ಯಜಿಸುವುದರಿಂದ ಅಚೌರ್ಯವ್ರತವುಂಟಾಗುವುದು. ಮೈಥುನವನ್ನು ತ್ಯಜಿಸುವವನಿಗೆ ಬ್ರಹ್ಮಚರ್ಯವ್ರತವುಂಟಾಗುವುದು. ಶರೀರದಲ್ಲಿ ಮಮಕಾರವಿಲ್ಲದವನಿಗೆ ಪರಿಗ್ರಹವಿರುವುದಿಲ್ಲ ॥ ೧೫೮—೧೫೯ ॥ ಈ ಪ್ರಕಾರವಾಗಿ ಹಿಂಸಾರಹಿತನಾದ ಆ ಪ್ರೋಷಧೋಪವಾಸಿಯು ವ್ಯವಹಾರೋಪಚಾರದಿಂದ ಮಹಾವ್ರತಿತ್ವವನ್ನು ಹೊಂದುತ್ತಾನೆ. ಆದರೆ ಚಾರಿತ್ರಮೋಹನೀಯ ಕರ್ಮದ ಉದಯವಿರುವುದರಿಂದ ಸಂಯಮಸ್ಥಾನವಾದ ಆರನೆಯ ಪ್ರಮತ್ತಗುಣಸ್ಥಾನವನ್ನು ಪಡೆಯುವುದಿಲ್ಲ ॥ ೧೬೦ ॥ ವಿರತಾವಿರತ-ದೇಶವ್ರತಿ-ಶ್ರಾವಕನಿಗೆ ಭೋಗೋಪಭೋಗವಸ್ತುಗಳ ನಿಮಿತ್ತದಿಂದುಂಟಾಗುವ ಹಿಂಸೆಯು ಬೇರೆ ನಿಮಿತ್ತದಿಂದಾಗುವುದಿಲ್ಲ. ಆದುದರಿಂದ ಹೇಯ ಮತ್ತು ಉಪಾದೇಯ ವಸ್ತುಸ್ವರೂಪವನ್ನೂ ತನ್ನ ಶಕ್ತಿಯನ್ನೂ ವಿಚಾರ ಮಾಡಿ (ಶಕ್ತ್ಯನುಸಾರವಾಗಿ) ಭೋಗೋಪಭೋಗಪದಾರ್ಥಗಳನ್ನು ತ್ಯಜಿಸಬೇಕು ॥ ೧೬೧ ॥ ಅನಂತಪ್ರಾಣಿಗಳಿಗೆ ಆಶ್ರಯವಾದ ದೇಹವುಳ್ಳ ಒಂದು ಮುಖ್ಯ ಪ್ರಾಣಿಯನ್ನು ಹಿಂಸಿಸಬೇಕೆಂಬ ಇಚ್ಛೆಯುಳ್ಳ ಮನುಷ್ಯನು ಅನಂತಪ್ರಾಣಿಗಳನ್ನು ಹಿಂಸಿಸುವ ಪಾಪಭಾಗಿಯಾಗುವುದರಿಂದ ಸಂಪೂರ್ಣವಾದ ಅನಂತಕಾಯಗಳ ಪರಿತ್ಯಾಗವನ್ನು ಅವಶ್ಯವಾಗಿ ಮಾಡಬೇಕು. ಕಂದಮೂಲಗಳು ಅನಂತಕಾಯಗಳೆನ್ನಿಸುವುದರಿಂದ ಅವುಗಳ ಭಕ್ಷಣವನ್ನೂ ಇತರ ಅನಂತಕಾಯಗಳ ಭಕ್ಷಣವನ್ನೂ ತ್ಯಜಿಸಬೇಕೆಂದರ್ಥವು ॥ ೧೬೨ ॥ ಬಹುಜೀವಗಳ ಉತ್ಪತ್ತಿಸ್ಥಾನವಾದ ಬೆಣ್ಣೆಯನ್ನೂ ತ್ಯಜಿಸಬೇಕು. ಮತ್ತು ಭೋಜನಶುದ್ಧಿಯಲ್ಲಿ ಯಾವುದೊಂದು ವಸ್ತುವು

ಅವಿರುದ್ಧಾ ಅಪಿ ಭೋಗಾ ನಿಜಶಕ್ತಿಮಪೇಕ್ಷ್ಯ ಧೀಮತಾ ತ್ಯಾಜ್ಯಾಃ ।
ಅತ್ಯಾಜ್ಯೇಷ್ವಪಿ ಸೀಮಾ ಕಾರ್ಯೈಕದಿವಾನಿಶೋಪಭೋಗ್ಯತಯಾ ॥ ೧೬೪ ॥
ಪುನರಪಿ ಪೂರ್ವಕೃತಾಯಾಂ ಸಮೀಕ್ಷ್ಯ ತಾತ್ಕಾಲಿಕೀಂ ನಿಜಾಂ ಶಕ್ತಿಂ ।
ಸೀಮನ್ಯಂತರಸೀಮಾ ಪ್ರತಿದಿವಸಂ ಭವತಿ ಕರ್ತವ್ಯಾ ॥ ೧೬೫ ॥
ಇತಿ ಯಃ ಪರಿಮಿತಭೋಗೈಃ ಸಂತುಷ್ಟಸ್ತ್ಯಜತಿ ಬಹುತರಾನ್ ಭೋಗಾನ್ ।
ಬಹುತರಹಿಂಸಾವಿರಹಾತ್ತಸ್ಯಾಽಹಿಂಸಾ ವಿಶಿಷ್ಟಾ ಸ್ಯಾತ್ ॥ ೧೬೬ ॥
ವಿಧಿನಾ ದಾತೃಗುಣವತಾ ದ್ರವ್ಯವಿಶೇಷಸ್ಯ ಜಾತರೂಪಾಯ ।
ಸ್ವಪರಾನುಗ್ರಹಹೇತೋಃ ಕರ್ತವ್ಯೋಽವಶ್ಯಮತಿಥಯೇ ಭಾಗಃ ॥ ೧೬೭ ॥

ವಿರುದ್ಧವೆಂದು ಹೇಳಲ್ಪಟ್ಟಿದೆಯೋ ಅದನ್ನೂ ತ್ಯಜಿಸಬೇಕು. ಬೆಣ್ಣೆಯನ್ನೂ ಅಭಕ್ಷ್ಯವಸ್ತುವನ್ನೂ ತ್ಯಜಿಸಬೇಕೆಂದು ಭಾವವು ॥ ೧೬೩ ॥ ಬುದ್ಧಿಶಾಲಿಯು ತನ್ನ ಶಕ್ತ್ಯನುಸಾರವಾಗಿ ಶಾಸ್ತ್ರವಿರುದ್ಧವಲ್ಲದ ಭೋಗಯೋಗ್ಯವಸ್ತುಗಳನ್ನೂ ತ್ಯಜಿಸಬೇಕು. ಒಂದು ವೇಳೆ ಅಂತಹ ಉಪಭೋಗಯೋಗ್ಯವಸ್ತುಗಳಲ್ಲಿಯೂ, ಅವುಗಳನ್ನು ಸಂಪೂರ್ಣವಾಗಿ ತ್ಯಜಿಸಲಾಗದಿದ್ದರೆ ಒಂದು ದಿನ ರಾತ್ರಿ ಇತ್ಯಾದಿ ಕಾಲಪರಿಮಿತಿಯಿಂದಲಾದರೂ ತ್ಯಜಿಸಬೇಕು. ಯಾವಜ್ಜೀವ ಮಾಡಲ್ಪಡುವ ವ್ರತಕ್ಕೆ ಯಮವ್ರತವೆಂದೂ ದಿವಸ ಪಕ್ಷ ಮಾಸ ಇತ್ಯಾದಿ ಕಾಲಪರಿಮಿತಿಯಿಂದ ಮಾಡಲ್ಪಡುವ ವ್ರತಕ್ಕೆ ನಿಯಮವ್ರತವೆಂದೂ ಹೆಸರು ॥ ೧೬೪ ॥ ಮೊದಲು ಮಾಡಲ್ಪಟ್ಟ ದಿಗವಧಿಯಲ್ಲಿ ಮತ್ತೂ ತಾತ್ಕಾಲಿಕವಾದ ತನ್ನ ಶಕ್ತಿಯನ್ನು ನೋಡಿ ತಾನು ಮಾಡಿಕೊಂಡಿರುವ ಅವಧಿಯೊಳಗೂ ಪ್ರತಿದಿವಸ ವ್ರತ-ನಿಯಮವನ್ನು ಮಾಡಬೇಕು ॥ ೧೬೫ ॥ ಯಾವ ಗೃಹಸ್ಥ-ಶ್ರಾವಕನು ಈ ರೀತಿಯಾಗಿ ಪರಿಮಿತವಾದ ಭೋಗೋಪಭೋಗವಸ್ತುಗಳಿಂದ ಸಂತುಷ್ಟನಾಗಿ ತನ್ನ ಆವಶ್ಯತೆಗಿಂತ ಹೆಚ್ಚಾದ ಭೋಗೋಪಭೋಗವಸ್ತುಗಳನ್ನು ತ್ಯಜಿಸುತ್ತಾನೋ ಅವನಿಗೆ ಹೆಚ್ಚಿನ ಹಿಂಸೆಯ ತ್ಯಾಗವಾಗುವುದರಿಂದ ಅಹಿಂಸಾವ್ರತದ ಉತ್ಕೃಷ್ಟತೆಯುಂಟಾಗುವುದು ॥ ೧೬೬ ॥ ದಾನಮಾಡುವವನಲ್ಲಿರಬೇಕಾದ ಗುಣಗಳುಳ್ಳ ಗೃಹಸ್ಥಶ್ರಾವಕನು ಜಾತರೂಪ–ದಿಗಂಬರನಾದ ಅತಿಥಿಗೆ ಸ್ವಪರಾನುಗ್ರಹನಿಮಿತ್ತವಾಗಿ ದಾನಮಾಡುವುದಕ್ಕೆ ಯೋಗ್ಯವಾದ ವಸ್ತುವಿನ ಭಾಗವನ್ನು ಶಾಸ್ತ್ರೋಕ್ತವಿಧಿಪೂರ್ವಕ ಅವಶ್ಯವಾಗಿ ಮಾಡಬೇಕು. ಉತ್ತಮದಾನಿಯು ತನಗೆ ಪುಣ್ಯನಿಮಿತ್ತವಾಗಿಯೂ ಪಾತ್ರಕ್ಕೆ ಸಂಯಮ-ಚಾರಿತ್ರವೃದ್ಧಿನಿಮಿತ್ತವಾಗಿಯೂ ಎಂದರೆ ಸ್ವಪರೋಪಕಾರನಿಮಿತ್ತವಾಗಿ ಉತ್ತಮಪಾತ್ರಕ್ಕೆ ಉತ್ತಮ ವಸ್ತುಗಳನ್ನು ಉತ್ತಮವಿಧಿ

ಸಂಗ್ರಹಮುಚ್ಚಸ್ಥಾನಂ ಪಾದೋದಕಮರ್ಚನಂ ಪ್ರಣಾಮಂ ಚ ।
ವಾಕ್ಕಾಯಮನಃಶುದ್ಧಿರೇಷಣಶುದ್ಧಿಶ್ಚ ವಿಧಿಮಾಹುಃ ॥ ೧೬೮ ॥
ಐಹಿಕಫಲಾನಪೇಕ್ಷಾ ಕ್ಷಾಂತಿರ್ನಿಷ್ಕಪಟತಾನಸೂಯತ್ವಂ ।
ಅವಿಷಾದಿತ್ವಮುದಿತ್ವೇ ನಿರಹಂಕಾರಿತ್ವಮಿತಿ ಹಿ ದಾತೃಗುಣಾಃ ॥ ೧೬೯ ॥
ರಾಗದ್ವೇಷಾಸಂಯಮಮದದುಃಖಭಯಾದಿಕಂ ನ ಯತ್ಕುರುತೇ ।
ದ್ರವ್ಯಂ ತದೇವ ದೇಯಂ ಸುತಪಃಸ್ವಾಧ್ಯಾಯವೃದ್ಧಿಕರಂ ॥ ೧೭೦ ॥
ಪಾತ್ರಂ ತ್ರಿಭೇದಮುಕ್ತಂ ಸಂಯೋಗೋ ಮೋಕ್ಷಕಾರಣಗುಣಾನಾಂ ।
ಅವಿರತಸಮ್ಯಗ್ದೃಷ್ಟಿಃ ವಿರತಾವಿರತಶ್ಚ ಸಕಲವಿರತಶ್ಚ ॥ ೧೭೧ ॥

ಯಿಂದ ದಾನಮಾಡಿದರೆ ಪುಣ್ಯ ವಿಶೇಷವುಂಟಾಗುವುದೆಂದೂ ನಿಯತ ಕಾಲದ ವರೆಗೆ ಅತಿಥಿಯನ್ನು ಕಾದಿದ್ದು ದಾನವನ್ನು ಮಾಡಿ ಆ ಮೇಲೆ ತಾನು ಭೋಜನಮಾಡಬೇಕೆಂದೂ ಭಾವವು ॥ ೧೬೭ ॥ ಅತಿಥಿಯನ್ನು ಯೋಗ್ಯ ರೀತಿಯಿಂದ ಸ್ವಾಗತಿಸುವುದು, ಉನ್ನತಸ್ಥಾನದಲ್ಲಿ ಕುಳ್ಳಿರಿಸುವುದು, ಕಾಲು ತೊಳೆಯುವುದು, ಪೂಜಿಸುವುದು, ನಮಸ್ಕರಿಸುವುದು, ವಾಕ್ಕಾಯಮನಃಶುದ್ಧಿ, ಭೋಜನಶುದ್ಧಿ— ಇವುಗಳು ನವವಿಧಭಕ್ತಿರೂಪವಾದ ವಿಧಿಯೆಂದು ಹೇಳುತ್ತಾರೆ ॥ ೧೬೮ ॥ ಇಹಲೋಕಸಂಬಂಧವಾದ ಸುಖಫಲದ ಅಪೇಕ್ಷೆಯಿಲ್ಲದಿರುವುದು, ಕ್ಷಮೆ, ನಿಷ್ಕಪಟರೂಪವಾದ ಸರಳತೆ, ಈರ್ಷಾರಾಹಿತ್ಯ, ಖೇದರಹಿತಭಾವ, ಹರ್ಷಭಾವ, ನಿರಹಂಕಾರತ್ವ ಇವು ಏಳು ನಿಶ್ಚಯವಾಗಿ ದಾತೃವಿನ ಗುಣಗಳಾಗಿವೆ. ದಾತೃವಿನಲ್ಲಿರಬೇಕಾದ ಈ ಗುಣಗಳು ಹೆಚ್ಚುಕಡಮೆಯಾದರೆ ಪುಣ್ಯರೂಪವಾದ ಫಲವೂ ಹೆಚ್ಚುಕಡಮೆಯಾಗುವುದೆಂದು ಭಾವವು ॥ ೧೬೯ ॥ ಯಾವ ಪದಾರ್ಥವು ಪಾತ್ರಕ್ಕೆ ರಾಗ, ದ್ವೇಷ, ಅಸಂಯಮ, ಮದ, ದುಃಖ, ಭಯ ಮೊದಲಾದುವನ್ನುಂಟುಮಾಡುವುದಿಲ್ಲವೋ ಉತ್ತಮ ತಪಸ್ಸನ್ನೂ ಶಾಸ್ತ್ರಾಧ್ಯಯನವನ್ನೂ ಹೆಚ್ಚಿಸುವ ಅಂತಹ ಪದಾರ್ಥವನ್ನೇ ಕೊಡಬೇಕು ॥ ೧೭೦ ॥ ಮೋಕ್ಷಕ್ಕೆ ಕಾರಣಗಳಾದ ಸಮ್ಯಗ್ದರ್ಶನಜ್ಞಾನಚಾರಿತ್ರರೂಪಗುಣಗಳ ಸಂಯೋಗ-ಸಮಾವೇಶವಿರುವ ಪಾತ್ರವು ಅವಿರತಸಮ್ಯಗ್ದೃಷ್ಟಿ ವಿರತಾವಿರತ-ದೇಶವ್ರತಿ ಸಕಲವಿರತ-ಮಹಾವ್ರತಿಯೆಂದು ಮೂರು ಭೇದವುಳ್ಳುದಾಗಿದೆ. ದಾನವನ್ನು ತೆಗೆದುಕೊಳ್ಳತಕ್ಕ ರತ್ನತ್ರಯಯುಕ್ತವಾದ ಪಾತ್ರವು ಉತ್ತಮ ಮಧ್ಯಮ ಜಘನ್ಯಭೇದದಿಂದ ಮೂರು ಪ್ರಕಾರವಾಗಿರುತ್ತದೆಂದೂ ಮಹಾವ್ರತಿಯು ಉತ್ತಮಪಾತ್ರವೆಂದೂ ದೇಶವ್ರತಿಯು ಮಧ್ಯಮಪಾತ್ರವೆಂದೂ ವ್ರತರಹಿತನಾದ ಸಮ್ಯಗ್ದೃಷ್ಟಿಯು

ಹಿಂಸಾಯಾಃ ಪರ್ಯಾಯೋ ಲೋಭೋಽತ್ರ ನಿರಸ್ಯತೇ ಯತೋ ದಾನೇ ।
ತಸ್ಮಾದತಿಥಿವಿತರಣಂ ಹಿಂಸಾವಿರಮಣಮೇವೇಷ್ಟಂ ॥ ೧೭೨ ॥
ಗೃಹಮಾಗತಾಯ ಗುಣಿನೇ ಮಧುಕರವೃತ್ತ್ಯಾ ಪರಾನಪೀಡಯತೇ ।
ವಿತರತಿ ಯೋ ನಾತಿಥಯೇ ಸ ಕಥಂ ನ ಹಿ ಲೋಭವಾನ್ ಭವತಿ ॥ ೧೭೩ ॥
ಕೃತಮಾತ್ಮಾರ್ಥಂ ಮುನಯೇ ದದಾತಿ ಭಕ್ತಮಿತಿ ಭಾವಿತಸ್ತ್ಯಾಗಃ ।
ಅರತಿವಿಷಾದವಿಮುಕ್ತಃ ಶಿಥಿಲಿತಲೋಭೋ ಭವತ್ಯಹಿಂಸೈವ ॥ ೧೭೪ ॥
ಇಯಮೇಕೈವ ಸಮರ್ಥಾ ಧರ್ಮಸ್ವಂ ಮೇ ಮಯಾ ಸಮಂ ನೇತುಂ ।
ಸತತಮಿತಿ ಭಾವನೀಯಾ ಪಶ್ಚಿಮಸಲ್ಲೇಖನಾ ಭಕ್ತ್ಯಾ ॥ ೧೭೫ ॥

ಜಘನ್ಯಪಾತ್ರವೆಂದೂ ಭಾವವು ॥ ೧೭೧ ॥ ಈ ದಾನದಲ್ಲಿ ಹಿಂಸೆಯ ಪರ್ಯಾಯವಾಚಕವಾದ ಲೋಭವನ್ನು ನಾಶಮಾಡುವುದರಿಂದ ಅತಿಥಿಗೆ ಮಾಡುವ ದಾನವು ಹಿಂಸೆಯ ತ್ಯಾಗವೆಂದೇ ಅಭಿಮತವಾಗಿದೆ. ಲೋಭದ ತ್ಯಾಗದಿಂದ ಹಿಂಸೆಯ ತ್ಯಾಗವಾದಂತೆಯೇ ಆಗುವುದೆಂದು ಭಾವವು ॥ ೧೭೨ ॥ ಮನೆಗೆ ಬಂದವನೂ ಸಂಯಮಾದಿಗುಣಯುಕ್ತನೂ ಮಧುಕರ ವೃತ್ತಿಯಿಂದ (ಹೂವಿಗೆ ಬಾಧೆಯನ್ನುಂಟುಮಾಡದೆ ಮಕರಂದವನ್ನು ಹೀರಿ ಕೊಳ್ಳುವ ದುಂಬಿಯ ವ್ಯಾಪಾರದಿಂದ) ಬೇರೆಯವರಿಗೆ ಬಾಧೆಯನ್ನುಂ ಟುಮಾಡದಿರುವವನೂ ಆದ ಅತಿಥಿಗೆ ಯಾವ ಗೃಹಸ್ಥ-ಶ್ರಾವಕನು ದಾನ ಮಾಡುವುದಿಲ್ಲವೋ ಅವನು ಹೇಗೆ ಲೋಭವುಳ್ಳವನಾಗುವುದಿಲ್ಲ? ಅತಿಥಿಗೆ ದಾನಮಾಡದಿರುವ ಶ್ರಾವಕನು ಲೋಭಿಯೆಂದು ಭಾವವು ॥ ೧೭೩ ॥ ತನಗೋಸ್ಕರ ಮಾಡಲ್ಪಟ್ಟಿರುವ ಆಹಾರವಸ್ತುವನ್ನು ಮುನಿಗೆ ದಾನ ಮಾಡುತ್ತಾನೆಂದು ಭಾವಿಸಲ್ಪಟ್ಟಿರುವುದೂ ಅಪ್ರೀತಿ ಮತ್ತು ವಿಷಾದರಹಿ ತವೂ ಲೋಭಭಾವವನ್ನು ಶಿಥಿಲಮಾಡುವುದೂ ಆದ ದಾನವು ಅಹಿಂ ಸೆಯೇ ಆಗಿರುತ್ತದೆ ॥ ೧೭೪ ॥ ನನ್ನ ಧರ್ಮವೆಂಬ ಧನವನ್ನು ನನ್ನೊಡನೆ ಐದಿಸುವುದಕ್ಕೆ ಸಮರ್ಥವಾದುದು ಈ ಸಲ್ಲೇಖನವೊಂದೇ ಎಂದು ಮರಣಕಾಲದಲ್ಲಿ ಭಾವಿಸಲ್ಪಡತಕ್ಕ ಸಲ್ಲೇಖನಾವನ್ನು ಭಕ್ತಿಯಿಂದ ಯಾವಾಗಲೂ ಭಾವಿಸಬೇಕು. ಆಯುಷ್ಯ ಶ್ವಾಸೋಚ್ಛ್ವಾಸ ಮೊದ ಲಾದ ದಶಪ್ರಾಣಗಳು ಪ್ರತಿಸಮಯದಲ್ಲಿ ಕಳೆಯುತ್ತಿರುವುದಕ್ಕೆ ನಿತ್ಯ ಮರಣವೆಂದೂ ಪ್ರಕೃತಭವದ ಕೊನೆಯಲ್ಲುಂಟಾಗುವ ಪ್ರಾಣನಾಶಕ್ಕೆ ತದ್ಭವಮರಣವೆಂದೂ ಆ ಮರಣಕಾಲದಲ್ಲಿ ಮನುಷ್ಯನು ತನ್ನ ದೇಹವೆಂಬ ದೇಶದಲ್ಲಿ ವ್ರತರೂಪವಾದ ವ್ಯಾಪಾರವನ್ನು ಮಾಡಿ ಸಂಪಾದಿಸಿದ ಧರ್ಮರೂಪವಾದ ಧನವನ್ನು ಪರಲೋಕರೂಪವಾದ ಅನ್ಯದೇಶಕ್ಕೆ

ಮರಣಾಂತೇಽವಶ್ಯಮಹಂ ವಿಧಿನಾ ಸಲ್ಲೇಖನಾಂ ಕರಿಷ್ಯಾಮಿ ।
ಇತಿ ಭಾವನಾಪರಿಣತೋಽನಾಗತಮಪಿ ಪಾಲಯೇದಿದಂ ಶೀಲಂ ॥ ೧೭೬ ॥
ಮರಣೇಽವಶ್ಯಂ ಭಾವಿನಿ ಕಷಾಯಸಲ್ಲೇಖನಾತನೂಕರಣಮಾತ್ರೇ ।
ರಾಗಾದಿಮಂತರೇಣ ವ್ಯಾಪ್ರಿಯಮಾಣಸ್ಯ ನಾತ್ಮಘಾತೋಽಸ್ತಿ ॥ ೧೭೭ ॥
ಯೋ ಹಿ ಕಷಾಯಾವಿಷ್ಟಃ ಕುಂಭಕಜಲಧೂಮಕೇತುವಿಷಶಸ್ತ್ರೈಃ ।
ವ್ಯಪರೋಪಯತಿ ಪ್ರಾಣಾನ್ ತಸ್ಯ ಸ್ಯಾತ್ಸತ್ಯಮಾತ್ಮವಧಃ ॥ ೧೭೮ ॥

ಒಯ್ಯಲು ಸಲ್ಲೇಖನವೇ ಸಮರ್ಥವಾದುದೆಂದು ಯಾವಾಗಲೂ ಭಾವಿಸಬೇಕೆಂದೂ ಭಾವವು ॥ ೧೭೫ ॥ ನಾನು ಮರಣಕಾಲದಲ್ಲಿ ಅವಶ್ಯವಾಗಿ ಶಾಸ್ತ್ರೋಕ್ತವಿಧಿಯಿಂದ ಸಲ್ಲೇಖನವನ್ನು ಮಾಡುವೆನು ಎಂಬ ಭಾವನಾಯುಕ್ತನಾಗಿ ಮರಣಕಾಲವು ಪ್ರಾಪ್ತವಾಗದಿದ್ದರೂ ಸಲ್ಲೇಖನಾರೂಪವಾದ ಈ ವ್ರತವನ್ನು ಪರಿಪಾಲಿಸಬೇಕು. ನಾನು ಮರಣಕಾಲದಲ್ಲಿ ಅವಶ್ಯವಾಗಿ ಸನ್ನ್ಯಾಸವನ್ನು ಧರಿಸುವೆನು ಎಂಬೀ ಸಂಸ್ಕಾರವನ್ನುಂಟುಮಾಡಿಕೊಳ್ಳುವುದಕ್ಕೋಸ್ಕರ ಸಲ್ಲೇಖನಾವನ್ನು ಭಾವಿಸುತ್ತಿರಬೇಕೆಂದು ಭಾವವು ॥ ೧೭೬ ॥ ಅವಶ್ಯವಾಗಿ ಮುಂದೆ ಇಂತಹ ಸಮಯದಲ್ಲಿ ಮರಣವು ಸಂಭವಿಸುವುದೆಂದು ತಿಳಿದು ಕ್ರೋಧಾದಿಕಷಾಯಸಲ್ಲೇಖನಾವನ್ನು ಕೃಶ ಮಾಡುವುದರಲ್ಲಿ ಮಾತ್ರ ತೊಡಗಿರುವ ಮನುಷ್ಯನಿಗೆ ರಾಗದ್ವೇಷಾದಿಭಾವನೆಗಳಿಲ್ಲದಿರುವುದರಿಂದ ಆತ್ಮಘಾತರೂಪವಾದ ದೋಷವು ಸಂಭವಿಸುವುದಿಲ್ಲ. ಮನೆಗೆ ಬೆಂಕಿಯು ಹತ್ತಿಕೊಂಡಾಗ ಅದನ್ನು ಆರಿಸುವುದಕ್ಕೆ ಪ್ರಯತ್ನಿಸಿ ಅದು ಸಾಧ್ಯವಾಗುವುದಿಲ್ಲವೆಂದು ನಿಶ್ಚಿತವಾದ ಬಳಿಕ ಆ ಮನೆಯಲ್ಲಿರುವ ಮುಖ್ಯ ವಸ್ತುಗಳನ್ನು ತೆಗೆಯುವುದಕ್ಕೆ ಪ್ರಯತ್ನಿಸುವಂತೆ ಔಷಧೋಪಚಾರದಿಂದ ವ್ಯಾಧಿಯು ಗುಣಮುಖವಾಗುವುದಿಲ್ಲವೆಂದೂ ಇಂತಹ ಸಮಯದಲ್ಲಿ ಮರಣವು ಅವಶ್ಯವಾಗಿ ಆಗುವುದೆಂದೂ ನಿಶ್ಚಿತವಾಗಿ ತಿಳಿದ ಬಳಿಕ ಸಲ್ಲೇಖನಾವ್ರತವನ್ನು ಗ್ರಹಣಮಾಡುವ ಗೃಹಸ್ಥ-ಶ್ರಾವಕನಿಗೆ ರಾಗದ್ವೇಷಾದಿಭಾವಗಳಿಲ್ಲದಿರುವುದರಿಂದ ಆತ್ಮಘಾತದೋಷವುಂಟಾಗುವುದಿಲ್ಲವೆಂದು ಭಾವವು ॥ ೧೭೭ ॥ ಕ್ರೋಧಾದಿಕಷಾಯಭಾವಗಳಿಂದ ಕೂಡಿರುವ ಗೃಹಸ್ಥ-ಶ್ರಾವಕನೇ ಶ್ವಾಸನಿರೋಧ ಜಲ ಅಗ್ನಿ ವಿಷ ಶಸ್ತ್ರ ಇವುಗಳಿಂದ ತನ್ನ ಪ್ರಾಣಗಳನ್ನು ಘಾತಮಾಡಿಕೊಳ್ಳುತ್ತಾನೆ. ಅವನಿಗೆ ಆತ್ಮಘಾತದೋಷವುಂಟಾಗುವುದು. ವಿಶೇಷವೇನೆಂದರೆ—ಒಂದು ವೇಳೆ ಮರಣಕಾಲವು ನಿಶ್ಚಿತವಾಗಿ ಗೊತ್ತಾಗದಿದ್ದರೆ ಪರಿಮಿತಕಾಲದ ವರೆಗೆ ಸಲ್ಲೇಖನಾವನ್ನು ಗ್ರಹಣಮಾಡಿ ಆ ಮೇಲೆ

ನೀಯಂತೇಽತ್ರ ಕಷಾಯಾ ಹಿಂಸಾಯಾ ಹೇತವೋ ಯತಸ್ತನುತಾಂ ।
ಸಲ್ಲೇಖನಾಮಪಿ ತತಃ ಪ್ರಾಹುರಹಿಂಸಾಪ್ರಸಿದ್ಧ್ಯರ್ಥಂ ॥ ೧೭೯ ॥
ಇತಿ ಯೋ ವ್ರತರಕ್ಷಾರ್ಥಂ ಸತತಂ ಪಾಲಯತಿ ಸಕಲಶೀಲಾನಿ ।
ವರಯತಿ ಪತಿಂವರೇವ ಸ್ವಯಮೇವ ತಮುತ್ಸುಕಾ ಶಿವಪದಶ್ರೀಃ ॥ ೧೮೦ ॥

ಆಹಾರವನ್ನು ಗ್ರಹಣಮಾಡಬಹುದು ॥ ೧೭೮ ॥ ಈ ಸಲ್ಲೇಖನಾಮರಣದಲ್ಲಿ ಹಿಂಸೆಗೆ ಕಾರಣಗಳಾದ ಕ್ರೋಧಾದಿಕಷಾಯಭಾವಗಳು ಕೃಶತೆಯನ್ನು ಹೊಂದಿಸಲ್ಪಡುವುದರಿಂದ ಅಹಿಂಸೆಯ ಸಿದ್ಧಿಗೋಸ್ಕರ ಸಲ್ಲೇಖನವೂ ಆವಶ್ಯಕವೆಂದು ಆಚಾರ್ಯರು ಹೇಳುತ್ತಾರೆ. ಅಹಿಂಸಾದಿವ್ರತಗಳಂತೆ ಸಲ್ಲೇಖನವೂ ಆವಶ್ಯಕವೆಂದು ಭಾವವು ॥ ೧೭೯ ॥ ಈ ರೀತಿಯಾಗಿ ಯಾವನು ಅಹಿಂಸಾದಿಪಂಚವ್ರತಗಳ ರಕ್ಷಣೆಗೋಸ್ಕರ ಸಮಸ್ತಶೀಲಗಳನ್ನು (ಮೂರು ಗುಣವ್ರತಗಳನ್ನು ನಾಲ್ಕು ಶಿಕ್ಷಾವ್ರತಗಳನ್ನು) ಯಾವಾಗಲೂ ಪಾಲಿಸುತ್ತಾನೋ ಅವನನ್ನು ಮೋಕ್ಷಲಕ್ಷ್ಮಿಯು ಕುತೂಹಲವುಳ್ಳವಳಾಗಿ, ಸ್ವಯಂವರಕನ್ಯೆಯಂತೆ, ತಾನಾಗಿ ವರಿಸುತ್ತಾಳೆ. ಅಹಿಂಸಾದಿ ಪಂಚವ್ರತಗಳನ್ನೂ ದಿಗ್ವ್ರತಾದಿ ಸಪ್ತಶೀಲಗಳನ್ನೂ ಪರಿಪಾಲಿಸುವವನು ಮುಕ್ತಿಯನ್ನು ಹೊಂದುವನೆಂದು ಭಾವವು ॥ ೧೮೦ ॥

Printed at
The Saraswathi Printing Works, Ltd., Mangalore,
P.I.C. No. S.K. 23.

Published by
Sri K. S. Karanth, Puttur,
P.I.C. No. S.K. 51. 26-9-46/200 Copies.

ಶ್ರೀ ಅನಂತಕೀರ್ತಿ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ

ಗ್ರಂಥಗಳು

	ಗ್ರಂಥಗಳು	ಲೇಖಕರುಗಳು	
1.	ಅನಂತಮತಿಚರಿತೆ . .	ಜೈನಮಹಿಳೆ	1929
2.	ಲಕ್ಷ್ಮೀಬಾಯಿ . . .	,,	1930
3.	ಅಹಿಂಸೆ	ಎನ್. ಎಸ್. ಜೈನಿ	1931
4.	ಸತ್ತ್ವಪರೀಕ್ಷೆ . . .	,,	1932
5.	ಶ್ರೀ ಪಾರ್ಶ್ವನಾಥ ತೀರ್ಥಕರ ಚರಿತ್ರೆ	ಗೋವಿಂದ ಪೈ	1933
6.	ಜೈನರ ಮೂರು ರತ್ನಗಳು .	ಕೆ. ಭುಜಬಲಿ ಶಾಸ್ತ್ರಿ	1934
7.	ವೀರಜೀವನ . . .	ಜಿ. ಶಿಶುಪಾಲ ಶಾಸ್ತ್ರಿ	1935
8.	ದ್ವಾದಶಾನುಪ್ರೇಕ್ಷೆ . .	ಎ. ಶಾಂತಿರಾಜ ಶಾಸ್ತ್ರಿ	1936
9.	ಪರಮಾತ್ಮಬೋಧೆ . .	,,	1937
10.	ಇಷ್ಟೋಪದೇಶ	,,	1938
11.	ಶ್ರೀ ಬಾಹುಬಲಿ ಗೋಮಟೇಶ್ವರ ಚರಿತ್ರ	ಗೋವಿಂದ ಪೈ	1939
12.	ಪಾರ್ಶ್ವನಾಥ ಚಂಪೂ . .	ಜಿ. ಪಿ. ರಾಜರತ್ನಂ	1940
13.	ತ್ರಿಪುರದಾಹ . . .	ಮುಳಿಯ ತಿಮ್ಮಪ್ಪಯ್ಯ	1941
14.	ತ್ರೈಲೋಕ್ಯಚೂಡಾಮಣಿ ಸ್ತೋತ್ರ	ಎ. ಶಾಂತಿರಾಜ ಶಾಸ್ತ್ರಿ	1942
15.	ನಾರೀ-ಕರ-ದರ್ಪಣ . .	ಎ. ಶಾಂತಿರಾಜ ಶಾಸ್ತ್ರಿ	1943
16.	ಪುರುಷಾರ್ಥಸಿದ್ಧ್ಯುಪಾಯಃ .	,,	1945

ಈ ಗ್ರಂಥಗಳು ದೊರೆಯುವ ವಿಳಾಸ:—

ಪಣಪಿಲ ಅರಮನೆ ದೇಜಮ್ಮನವರು,

ಪಣಪಿಲ,

ಪೋಸ್ಟ್—ನೆಲ್ಲಿಕಾರ್, ದ. ಕ.